ಸೋಬಾನೆ ಕೃಷ್ಣೇಗೌಡ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಪ್ರೊ. ಡಿ. ಲಿಂಗಯ್ಯ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪೭

ಸೋಬಾನೆ ಕೃಷ್ಣೇಗೌಡ

ವ್ಯಕ್ತಿ ಪರಿಚಯ

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

SOBANE KRISHNE GOWDA -
A pen portrait - by Prof. D. LINGAIAH.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033.
Pages : 32 Price : Rs. 10 2010.

ಪ್ರಥಮ ಮುದ್ರಣ	೨೦೧೦
ಪ್ರತಿಗಳು	೨೦೦೦
ಪುಟಗಳು	೩೨
ಬೆಲೆ	ರೂ.೧೦ (ಹತ್ತು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಪ್ರೊ. ಡಿ. ಲಿಂಗಯ್ಯ ಅವರು ಸೋಬಾನೆ ಕೃಷ್ಣೇಗೌಡ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೦-೦೨-೨೦೦೦

ಸೋಬಾನೆ ಕೃಷ್ಣೇಗೌಡ

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿ ಒಂದು ಹಳ್ಳಿ ಲಕ್ಷ್ಮಿಸಾಗರ. ವ್ಯಕ್ತಿವಾಚಕ ಊರು. ಲಕ್ಷ್ಮಿಯಿಂದ ಲಕ್ಷ್ಮಿಸಾಗರ ಆಯಿತು ಎಂಬುದು ಒಂದು ಹೇಳಿಕೆ. ಊರು ಒಣಪ್ರದೇಶ. ಮಳೆ ಆಧಾರದಿಂದ ಬೇಸಾಯ. ರಾಗಿ, ಹುರುಳಿ, ಹುಚ್ಚೆಳ್ಳು, ವೀಳ್ಯದೆಲೆ ಬೆಳೆಯುವರು. ಹತ್ತಿರದಲ್ಲಿ ತೊಣ್ಣೂರು ಕೆರೆ. ಎಂಟುನೂರು ವರ್ಷ ಹಳೆಯದು. ಅದರಿಂದ ಸ್ವಲ್ಪ ನೀರಾವರಿ ಬೇಸಾಯ. ಈಚೆಗೆ ಹೇಮಾವತಿ ನದಿಯ ಅನುಗ್ರಹ. ಅದರಿಂದ ಬತ್ತದ ಬೇಸಾಯ. ಊರಿನಲ್ಲಿ ಗಂಗಡಿಕಾರ ಒಕ್ಕಲಿಗರು, ಹರಿಜನರು ಮೊದಲುಗೊಂಡು ಎಲ್ಲಾ ಜಾತಿಯವರೂ ವಾಸವಾಗಿದ್ದಾರೆ. ಆದರೆ ಬ್ರಾಹ್ಮಣರಿಲ್ಲ. ಜನಸಂಖ್ಯೆಯೂ ಸಾಕಷ್ಟಿದೆ. ದೇವರು ದಿಂಡರು, ಹಬ್ಬ ಹರಿದಿನ, ಆಚಾರ ಸಂಪ್ರದಾಯ ದಂಡಿಯಾಗಿವೆ.

ನಾಗಮಂಡಲ ತಾಲ್ಲೂಕು ಚಿಣ್ಯದಿಂದ ಒಂದು ಕುಟುಂಬ ಲಕ್ಷ್ಮಿಸಾಗರಕ್ಕೆ ವಲಸೆ ಬಂತು. ಅದು ಗೆಂಡೆ ಮರಿಗೌಡ ಮತ್ತು ದೊಡ್ಡಮ್ಮನ ಸಂಸಾರ. ಅವರ ಮೂವರು ಮಕ್ಕಳಲ್ಲಿ ಗೆಂಡೆ ಮರಿಮೊಳ್ಳೆಗೌಡ ಒಬ್ಬಾತ. ಅವನ ಹೆಂಡತಿ ಮಂಗಮ್ಮ. ಆ ದಂಪತಿಗಳ ಆರು ಜನ ಮಕ್ಕಳಲ್ಲಿ ಕೃಷ್ಣೇಗೌಡ ಐದನೆಯವನು. ಅವನು ಹುಟ್ಟಿದ್ದು ೫.೨.೧೯೩೫ರಲ್ಲಿ. ಬಡತನದ ಕುಟುಂಬ. ಒಂದೂವರೆ ಅಂಕಣದ ಹೆಂಚಿನ ಮನೆ. ಅಂಗೈಯಗಲ ಒಣಭೂಮಿ. ಬಾಲ್ಯದಲ್ಲಿ ತಾಯಿ ತಂದೆಯರ ಬೇಸಾಯಕ್ಕೆ ನೆರವಾದ. ಕುರಿ ಮೇಯಿಸುವುದು,

ಎಲೆ ಬಳ್ಳಿಗೆ ನೀರು ಹನಿಸುವುದು, "ಚಿಟ್ಟು"ಗೆ ಹೋಗಿ ಹೊರೆಹುಲ್ಲು ತರುವುದು, ಕೂಲಿಕೆಲಸ ಮಾಡುವುದು ಮುಖ್ಯ ಕಾಯಕ. ಬಡತನದ ಜೀವನ. ಶ್ರೀಮಂತರ ಬಸ್ಸು ತೊಳೆದರೆ ಆರುಕಾಸು ಸಂಪಾದನೆ. ಊರಿಗೆ ಸರಕಾರಿ ಶಾಲೆ ಬಂತು. ಒಂದು ಶೆಡ್ಡು ಶಾಲೆ. ಅಲ್ಲಿ ಎರಡನೇ ತರಗತಿಯವರೆಗೆ ಶಿಕ್ಷಣ ಪಡೆದ. ಅಷ್ಟೇ ಓದು. ತಾಯಿ ತಂದೆಯರೊಡನೆ ನೆಂಟರಿಷ್ಟರ ಊರಿನ ಹಬ್ಬ ಹರಿದಿನ, ಮಾದೇಶ್ವರ ಜಾತ್ರೆಗೆ ಹೋಗಿಬಂದ. ಅಲ್ಲೆಲ್ಲಾ ಸ್ತ್ರೀಪುರುಷರು ಹಾಡುತ್ತಿದ್ದ ಹಾಡುಗಳ ಕಡೆಗೆ ಗಮನಹರಿಯಿತು.

ಲಕ್ಷ್ಮೀಸಾಗರ, ತೊಣ್ಣೂರು ಸುತಮುತ್ತಲ ಊರುಗಳಲ್ಲಿ ರಾಕ್ಷಸ ದೇವತೆಗಳ ಆರಾಧನೆ. ನಿಕುಂಬಿನಿ ದೇವತೆಯದು ದೊಡ್ಡ ಹಬ್ಬ. ಅದೂ ವಿಶೇಷ ಸಂದರ್ಭದಲ್ಲಿ. ನಿಕುಂಬಿನಿ ದೇವಸ್ಥಾನದ ಮುಂದಿನ ಮಾವಿನ ಮರ ಬಿದ್ದುಸತ್ತರೆ ಆ ವರ್ಷ ಹಬ್ಬವಂತೆ. ಮಳೆ ಸಿಡಿಲು ಇಲ್ಲದಿದ್ದರೂ ಮರ ಬೀಳುವುದಂತೆ. ಹಾಗೆ ಬಿದ್ದ ಮರ ತಂತಾನೆ ಹುಟ್ಟುತ್ತಂತೆ. ಹಾಗೆಂದು ಹೇಳಿಕೆ. ಹಿಂದೆ ಹೀಗೇ ನಡೆಯುತ್ತಿತ್ತಂತೆ. ನಿಕುಂಬಿನಿ ಲಂಕಾಧೀಶ್ವರ ರಾವಣನ ಕುಲದೇವತೆ. ಮೂಲತಃ ರಾಕ್ಷಸದೇವತೆ. ಕೋಣ, ಕುರಿ ಬಲಿಯುಂಟು. ಯುಗಾದಿಗೆ ಮೊದಲು ತೊಣ್ಣೂರಿನವರು, ಯುಗಾದಿ ಆದಮೇಲೆ ಲಕ್ಷ್ಮೀಸಾಗರದವರು ಹಬ್ಬ ಮಾಡುತ್ತಾರೆ. ತೊಣ್ಣೂರು ರಾಕ್ಷಸಿಯ ಪೂಜೆಯೂ ಉಂಟು. ಅದಕ್ಕೆ ಹಂದಿ ಬಲಿ. ಅವು ಹೆಣ್ಣು ದೇವತೆಗಳು. ನಾರಾಯಣಸ್ವಾಮಿ, ಆಂಜನೇಯ ಗಂಡು ದೇವರುಗಳೂ ಉಂಟು. ಆ ಹಬ್ಬಗಳಲ್ಲೆಲ್ಲಾ ಹಾಡಿನ ಅಭಿಷೇಕ. ಹಾಡುವವರಿಗೆ, ಕಲಿಯುವವರಿಗೆ ಸುಗ್ಗಿ. ಕೃಷ್ಣೇಗೌಡ ಬೆಳೆದದ್ದು ಅಂಥ ಧಾರ್ಮಿಕ ಪರಿಸರದಲ್ಲಿ; ಸಾಂಸ್ಕೃತಿಕ ಸಂದರ್ಭದಲ್ಲಿ.

ಲಗಾಯತ್ತಿನಿಂದ ಊರಿನ ಹಬ್ಬ ಹರಿದಿನಗಳ ಆಚರಣೆಗೆ ಊರಿನವರೆಲ್ಲ ಪಾಲ್ಗೊಳ್ಳುವುದು ರೂಢಿ. ಊರಿನ ಒಂದೊಂದು ಗುಂಪು ಒಂದೊಂದು ಕಾರ್ಯದಲ್ಲಿ ನಿರತವಾಗುವುದು. ಬಂಡಿಪಾಲು (ಹಬ್ಬದ, ದೇವರ ಸಿಂಗಾರ, ಪೂಜೆ, ಬಂಡಿಕಟ್ಟುವುದು), ದೇವರ ಹಟ್ಟಿ ಪಾಲು (ದೇವರ ಪೂಜೆ ಮಾಡುವುದು), ಬಡ್ಲಕೇರಿ ಪಾಲು (ಬಡಗದಿಕ್ಕಿನವರು, ಪೂಜೆಮಾಡುವುದು), ಹೆಣ್ಣೊಳ್ಳಿಪಾಲು (ಮದ್ದಲೆ ನುಡಿಸುವುದು) ಮತ್ತು ಬಿಡೊಕ್ಕಲು (ರಂಗದ ಕುಣಿತಕ್ಕೆ ಬೆಂಕಿಹಾಕುವುದು) ಹಬ್ಬಗಳಲ್ಲಿ ಭಾಗವಹಿಸಿ, ನಿರ್ವಿಘ್ನವಾಗಿ ದೇವರ ಹಬ್ಬ ನಡೆಯಲು ನೆರವಾಗುವರು. ಬಡ್ಲಕೇರಿ ಪಾಲು ವಿಶಿಷ್ಟ. ಅವರಲ್ಲಿ ಹೆಂಗಸು ದೇವಾಲಯದಲ್ಲಿ ಪೂಜಾರಿಯಾಗಿ ಪೂಜೆಮಾಡುವಳು, ಕೊಂಡಹಾಯುವಳು. ಮೊದಲ ಮೂರು ಒಕ್ಕಲವರು ಅಣ್ಣತಮ್ಮಂದಿರು ಇದ್ದ ಹಾಗೆ. ಹೆಣ್ಣು ತರುವುದು ಕೊಡುವುದು ಇಲ್ಲ. ಹಬ್ಬಕ್ಕೆ ಒಂದು ತಿಂಗಳು ಮೊದಲು ರಂಗಕಟ್ಟುವುದು. ಆಗ ವೈವಿಧ್ಯಮಯ ಕುಣಿತ, ವಿನೂತನ ಹಾಡುಗಳ ಆರ್ಭಟ. ಅವುಗಳಲ್ಲಿ ಭಾಗವಹಿಸುವುದರಲ್ಲೂ ಕೃಷ್ಣೇಗೌಡ ಮುಂದು. ಅಲ್ಲಿ ಕಾಲಾಡಿಸಿ ಕುಣಿಯುವುದಕ್ಕೆ, ಬಾಯಾಡಿಸಿ ಹಾಡುವುದಕ್ಕೆ ಅಭ್ಯಾಸವಾಯಿತು. ಅದು ರಕ್ತಗತವಾಗಿ ಬಂದ ಗೀಳು.

ಮಗುವಿಗೆ ಮನೆ ಮೊದಲ ಪಾಠಶಾಲೆ, ತಾಯಿ ಮೊದಲ ಗುರು ಎನ್ನುವುದುಂಟು. ಕೃಷ್ಣೇಗೌಡನ ಪಾಲಿಗೆ ಅದು ನಿಜವಾಯಿತು – ಶಾಲೆಯ ಓದಿಗಲ್ಲ, ಜನಪದ ಗೀತೆಗಳ ಕಲಿಕೆಗೆ. ತಾಯಿ ಮಂಗಮ್ಮನಲ್ಲಿ ಅವಳ ತಾಯಿ ಮತ್ತು ಅಜ್ಜಿಯರಿಂದ ಕಲಿತ ಬೀಸುವ ಪದ, ಸೋಬಾನೆ ಪದಗಳ ಭಂಡಾರವಿತ್ತು. ಮಂಗಮ್ಮ ಕೋಳಿಕೂಗುವ ಹೊತ್ತಿಗೆ ಎದ್ದು ಮನೆಯಲ್ಲಿ ರಾಗಿಬೀಸುತ್ತಿದ್ದಳು, ಜೊತೆಗೆ ಹಾಡುಗಳನ್ನು ಹಾಡುತ್ತಿದ್ದಳು. ತಾಯಿಯ

ಜೊತೆಯಲ್ಲಿ ಕೃಷ್ಣೇಗೌಡನೂ ರಾಗಿಬೀಸಲು ತೊಡಗುತ್ತಿದ್ದ. ತಾಯಿಯ ಎದೆಯ ಹಾಡು ಮಗನ ಎದೆಹೊಕ್ಕವು. ಕ್ರಮೇಣ ತಾಯಿಯ ಒಟ್ಟಿಗೆ ಹಾಡಲು ಪ್ರಾರಂಭಿಸಿದ. ಹಾಗಾಗಿ ಹಾಡಿಗೆ ತಾಯಿಯೇ ಮೊದಲ ಗುರುವಾದಳು. ತಾಯಿಯ ಸಂಗಡ ರಾಗಿಬೀಸುವಾಗ, ನಾಟಿಹಾಕುವಾಗ, ಅವರೆ ತಳ್ಳು ಊರುವಾಗ, ಕಣದಲ್ಲಿ ಒಕ್ಕಣೆ ಮಾಡುವಾಗ ಹಾಡು ಕೇಳುವುದು, ಕಲಿಯುವುದು, ಹಾಡುವುದು ಮುಂದುವರಿಯಿತು. 'ಹಾಡ್ತಾ ಹಾಡ್ತಾ ರಾಗ' ಅನ್ನುವುದಿಲ್ಲವೇ ಹಾಗೆ. ಹಾಡುವ ಹಳ್ಳಿಹಕ್ಕಿಗೆ ಎಲ್ಲೆಯಿಲ್ಲ.

ಒಂದು ಮದುವೆ ಪ್ರಸಂಗ. ಲಕ್ಷ್ಮೀಸಾಗರದ ಹೆಣ್ಣು, ನಾಗಮಂಗಲದ ಗಂಡು. ಎರಡು ಕಡೆಯವರಿಗೂ ಹಾಡಿನ ಜುಗಲಬಂದಿ ಶುರುವಾಯಿತು. ನಾಗಮಂಗಲದ ಹೆಂಗಸು ದಬಾಯಿಸಿದಳು : 'ಬಂದರೆ ಹಾಡು, ಬರದಿದ್ದರೆ ಮುಚ್ಕಂಡು ನಡಿ!' ಕೃಷ್ಣೇಗೌಡನಿಗೆ ಚುರುಕುಮುಟ್ಟಿತು, ಛಲಹುಟ್ಟಿತು. ಯಾರಿಗೂ ಕಡಮೆಯಿಲ್ಲದಂತೆ, ಸೋಲದಂತೆ ಹಾಡು ಕಲಿಯಬೇಕು ಅಂದುಕೊಂಡ. ಶ್ರಮಿಸಿದ, ಸಾಧಿಸಿದ. ಮನಸಿದ್ದಂತೆ ಮಾದೇವ. ಮನಸ್ಸು ಮಾಡಿದರೆ ಯಾವುದು ತಾನೇ ಅಸಾಧ್ಯ?

ಆಗ ಮೂರು ದಿನಗಳ ಮದುವೆಯ ಕಾಲ. ಹತ್ತಾರು ಶಾಸ್ತ್ರಗಳು. ಎಲ್ಲಾ ಶಾಸ್ತ್ರಗಳಲ್ಲೂ ಮಹಿಳೆಯರ ಹಾಡುಗಾರಿಕೆಯ ಪಾರುಪತ್ಯ. ಎಲ್ಲರೂ ಗೊತ್ತಿರುವ ಒಕ್ಕಲಿಗರ ಹೆಂಗಸರೇ. ಕೃಷ್ಣೇಗೌಡ ಹಾಡುಗಾರ್ತಿಯರನ್ನು ಹಿಂಬಾಲಿಸಿದ. ನಮ್ಮ ಸಂಗಡ ನಿನಗೇನು ಕೆಲಸ ಅಂತ ತಳ್ಳಿದರು. ಬಿಡಲಿಲ್ಲ. ಬೆನ್ನು ಹತ್ತಿದ ಭೇತಾಳದಂತೆ ದುಂಬಾಲುಬಿದ್ದ. ಹೆಂಗಸರು ಹಾಡುವುದನ್ನು ಕಿವಿಗೊಟ್ಟು ಕೇಳಿದ. ತಾನೂ ಸೊಲ್ಲೆತ್ತಿದ. 'ಗಂಡಸು ನೀನು, ಹೆಂಗಸರಂಗೆ

ಹಾಡೂಕೇಕೆ ಬಿತ್ತೀ ಹೋಗು' ಅಂತ ಸವಟೆಗೆ ತಿವಿದರು. ದೂರ ಹೋಗಲಿಲ್ಲ. ಹಾಡುವುದಕ್ಕೇ ನಿಂತ. ಕೇಳಿದ್ದನ್ನು ನೆನಪಿಟ್ಟುಕೊಳ್ಳುವ ಕಲೆ ಕರಗತವಾಯಿತು. ಹೆಂಗಸರ ಹಾಗೇ ಅನುಕರಿಸಿ ದನಿ ತಗ್ಗಿಸಿ, ಎತ್ತರಿಸಿ ಹಾಡುವುದು ಅಭ್ಯಾಸವಾಯಿತು. ಈ ಗಂಡಸು ಹೆಂಗಸರಲ್ಲಿ ಒಬ್ಬನಾದ.

ಸೋಬಾನೆ ಕೃಷ್ಣೇಗೌಡ

ಒಮ್ಮೆ ಒಬ್ಬ ಮುದುಕನಿಗೆ ಮದುವೆಯಾಯಿತು. ಕೃಷ್ಣೇಗೌಡ ಊರಿನ ಹಾಡುಗಾರ್ತಿಯರೊಡನೆ ಮೊದಲಬಾರಿಗೆ ಹಾಡಿದ. ಜನರು 'ಸೋಬಾನೆ ಕೃಷ್ಣೇಗೌಡ' ಅಂದರು. ಆ ಹೆಸರೇ ಊರ್ಜಿತವಾಯಿತು. ಲಕ್ಷ್ಮೀಸಾಗರದ ಹನುಮಮ್ಮ, ಕಲ್ಯಾಣಮ್ಮ, ತಾಯಮ್ಮ, ದೇವಮ್ಮನವರೊಡನೆ ಒಂದು ತಂಡವಾಗಿ ಕೃಷ್ಣೇಗೌಡ ಹಾಡುವುದು ಮಾಮೂಲಾಯಿತು. ಹಾಡುವಾಗ ಹೆಂಗಸರ ದನಿಗೂ ಕೃಷ್ಣೇಗೌಡನ ದನಿಗೂ ವ್ಯತ್ಯಾಸಯಿರುತ್ತಿರಲಿಲ್ಲ.

ಕೃಷ್ಣೇಗೌಡ ಹೆತ್ತತಾಯಿಯಿಂದ, ಅತ್ತೆ (ದೊಡ್ಡಮ್ಮ)ಯಿಂದ, ಅಕ್ಕ ಕಲ್ಯಾಣಮ್ಮನಿಂದ, ಇತರರಿಂದ ಹಾಡುಕಲಿತ. ಹಾಡು ಹೇಳಿಕೊಟ್ಟವರೆಲ್ಲ ಗುರುಗಳೆಂದೇ ಭಾವಿಸಿ ಗೌರವಿಸಿದ. ನಂಜನಗೂಡು ದೊಡ್ಡ ಜಾತ್ರೆಯಲ್ಲಿ, ರಾಮನಗರ, ಮಾಗಡಿ, ಚನ್ನಪಟ್ಟಣ ಹಬ್ಬಗಳಲ್ಲಿ, ಉಜ್ಜನಿ ಚೌಡಮ್ಮ ಕೊಂಡದ ಹಬ್ಬದಲ್ಲಿ, ಗವಿರಂಗಪ್ಪ ಜಾತ್ರೆ, ಶ್ರವಣಬೆಳಗೋಳ ಜಾತ್ರೆಯಲ್ಲಿ, ಆದಿಚುಂಚನಗಿರಿ ಉತ್ಸವದಲ್ಲಿ ಭಾಗವಹಿಸಿ ಹಾಡುಗಳನ್ನು ಕಲಿತ. ಬೇಸಾಯಮಾಡುವಾಗ, ಹಬ್ಬಹರಿದಿನಗಳಿಗೆ ಪ್ರಯಾಣಮಾಡುತ್ತಾ ನಿದ್ದೆಗೆಟ್ಟಾಗ ಹಾಡುವುದು ಹವ್ಯಾಸವಾಯಿತು. ಯಾರಾದರೂ ಹಾಡಿದ್ದನ್ನು ಒಮ್ಮೆ ಕೇಳಿದರೆ ಅದು

ಕೃಷ್ಣೇಗೌಡನಿಗೆ ಕಂಠಸ್ಥವಾಯಿತು ಎಂದೇ ಲೆಕ್ಕ. ಮೌಖಿಕ ಸಾಹಿತ್ಯ ಉಳಿದು ಬಂದಿದ್ದೇ ಹಾಗೆ.

ನರಸಮ್ಮ ಹರಿಜನ ಮಹಿಳೆ. ದಿನಕ್ಕೆ ಎರಡು ಆಣೆ, ನಾಲ್ಕಾಣೆಗೆ ಕೂಲಿನಾಲಿ ಮಾಡಿ ಜೀವನಸಾಗಿಸುತ್ತಿದ್ದಳು ಸೊಗಸಾದ ಹಾಡುಗಾತಿ. ದಬ್ಬೆ ಕಟ್ಟುವಾಗ, ಈರುಳ್ಳಿ ನಾಟಿಹಾಕುವಾಗ, ಕುಯ್ಲು, ಒಕ್ಕಣೆ ಮಾಡುವಾಗ ರಾಗವಾಗಿ ಹಾಡುತ್ತಿದ್ದಳು. ಈರುಳ್ಳಿ ಹಾಡು ಅವಳದೇ ಕಾಣಿಕೆ. ವೀಳ್ಯೆ ಶಾಸ್ತ್ರದ ಹಾಡಿಗೂ ಆಕೆ ಪ್ರಸಿದ್ಧಿ. ಕೃಷ್ಣೇಗೌಡ ಆಕೆಯೊಡನೆ ಕೂಲಿಕೆಲಸ ಮಾಡುತ್ತಾ ಹಾಡುಕಲಿತ.

ಕಟ್ಟೆಸಿದ್ಧಮ್ಮ ನಾಗಮಂಗಲ ತಾಲ್ಲೂಕು ಸೋಮನಹಳ್ಳಿಯವಳು. ಒಕ್ಕಲಿಗ ಜಾತಿಯಾಕೆ. ಸೋಮನಹಳ್ಳಿ ಜಾತ್ರೆ ದೊಡ್ಡದು. ಹದಿನಾರು ಬಂಡಿ, ಹದಿನಾರು ಪೂಜೆಗೆ ಪ್ರಸಿದ್ಧಿ. ಜಾತ್ರೆಯಲ್ಲಿ ಕಟ್ಟೆ ಸಿದ್ಧಮ್ಮನ ಹಾಡುಗಾರಿಕೆ ಎದ್ದು ಕಾಣುವಂಥದ್ದು. ಕೃಷ್ಣೇಗೌಡ ಆಕೆಯಿಂದ ದೇವರ ಪದ, ದೂರಿಪದ, ಲಾಲಿಪದ ಮೊದಲಾದವುಗಳನ್ನು ಕಲಿತ.

ಕಿರುಗಾವಲಿನ ಪುಟ್ಟನಂಜಮ್ಮಜ್ಜಿ ದಾಸ ಒಕ್ಕಲಿಗರವಳು. ಅವಳಿಂದ ಕೃಷ್ಣೇಗೌಡ ಲೆಕ್ಕವಿಲ್ಲದಷ್ಟು ಹಾಡು ಕಲಿತುಕೊಂಡ. ಚುಂಚನಗಿರಿ ಪಾಳ್ಯದ ಗಿರಿಯಮ್ಮ, ಬ್ಯಾಲದಕೆರೆ ಕೆಂಪಮ್ಮ ಮೊದಲಾದವರಿಂದ ತಿಂಗಳುಮಾವನ ಹಾಡು, ಮಳೆರಾಯನ ಹಾಡು, ಗಂಗಮ್ಮ, ಬಿಳಿಗಿರಿರಂಗ ಮುಂತಾದ ಹಾಡುಗಳನ್ನು ತನ್ನದಾಗಿಸಿಕೊಂಡ. ಹಾಡುಹಕ್ಕಿಗಳಿಗೆ ಎಲ್ಲಾ ಮೂಲಗಳೂ ತೆರೆದ ಬಾಗಿಲೇ. ಅಷ್ಟಕ್ಕೂ ಮೌಖಿಕ ಸಾಹಿತ್ಯ ಚಾರಿತ್ರಿಕ ಭೌಗೋಳಿಕ ಪ್ರಸಾರಕ್ಕೆ, ಪ್ರಚಾರಕ್ಕೆ ಅತ್ಯುತ್ತಮ ಮಾಧ್ಯಮ.

ಕೃಷ್ಣೇಗೌಡನಿಗೆ ಮೂರುದಿನದ ಮದುವೆಯ ಎಲ್ಲಾ ಶಾಸ್ತ್ರಗಳೂ ಗೊತ್ತಿದ್ದವು. ಆ ಶಾಸ್ತ್ರದ ಹಾಡುಗಳೂ ಕರಗತ. ಯಾವ ಶಾಸ್ತ್ರಕ್ಕೆ ಹಾಡುಂಟು, ಯಾವುದಕ್ಕೆ ಇಲ್ಲ ಎಂಬುದನ್ನು ಬಲ್ಲವನಾಗಿದ್ದ. ಅವನು ಹೇಳುತ್ತಿದ್ದ ಮೂರು ದಿನದ ಮದುವೆಯ ಶಾಸ್ತ್ರಗಳು ಹೀಗಿವೆ:

ಮೊದಲನೆಯ ದಿನದ ಶಾಸ್ತ್ರಗಳು:

೧. ಉದ್ದಿನ ಹಿಟ್ಟು ಮಾಡುವುದು, ೨. ಹಪ್ಪಳಕ್ಕೆ ಸಿದ್ಧತೆ ಮಾಡುವುದು, ೩ ಹಸೆಮಣೆ ತರುವುದು. ೪. ಕಳಸ ಪೂಜುವುದು ೫. ಮನೆಗೆ ಪಟ್ಟ (ಬಾಸಿಂಗ) ತರುವುದು. ೬. ಮದುವೆ ಚಪ್ಪರಕಟ್ಟುವುದು. (ಇದಕ್ಕೆ ಹಾಡಿಲ್ಲ, ಮದುವೆ ಹೆಣ್ಣು ಮೈನೆರೆದಿದ್ದರೆ ಚಪ್ಪರಕ್ಕೆ ಸೋದರಮಾವ ಸೊಪ್ಪುತರಬೇಕು. ಮೈನೆರೆಯದಿದ್ದರೆ ಬಳಗದವರು ಸೊಪ್ಪುತರುವರು. ಕಳ್ಳಿ, ಬಸಿರಿಕಡ್ಡಿ, ಅತ್ತಿಕಡ್ಡಿ ಮೊದಲಾದ ಶಾಸ್ತ್ರದ ಕೊನೆ ತರುವುದು) ೭. ಮದುವೆ ಗಂಡಿಗೆ ನೀರು ಉಯ್ಯುವುದು. ೮. ಮನೆ ದೇವರಿಗೆ ಹಣ್ಣುಕಾಯಿ ಮಾಡಿಸುವುದು (ಇದಕ್ಕೆ ಹಾಡಿಲ್ಲ).

ಮದುವೆಯ ಎರಡನೆ ದಿನದ ಶಾಸ್ತ್ರಗಳು :

೧. ಗಂಡಿನ ಮನೆಯಿಂದ ಹೆಣ್ಣಿನ ಮನೆಗೆ ಆಳು ಕಳುಹಿಸುವುದು (ಇದಕ್ಕೆ ಹಾಡಿಲ್ಲ). ೨) ಹೆಣ್ಣಿನವರು ಗಂಡಿನ ಊರಿಗೆ ಬಂದು ಜಾಗ ಕೇಳುತ್ತಾರೆ. ತಾತ್ಕಾಲಿಕವಾಗಿ ಊರಿನ ಅರಳಿಕಟ್ಟೆ, ಚಾವಡಿಯಲ್ಲಿ ಕೂರಿಸುವರು. ೩. ಗಂಡಿನವರು ಕಳಸವಾದ್ಯ ಸಮೇತ ಹೆಣ್ಣಿನವರನ್ನು ಎದುರುಗೊಳ್ಳುತ್ತಾರೆ. ಬಂದವರ ತಲೆಗೆ ಎಣ್ಣೆಹಚ್ಚುವರು. ೪. ಹೆಣ್ಣಿನವರನ್ನು ಬಿಡದಿ ಮನೆಗೆ ಬಿಡುವರು. ಮದುವೆ ಮುಗಿಯುವವರೆಗೆ ಅದು ಹೆಣ್ಣಿನವರ ಮನೆ.

೫. ಹಾಲು ಅನ್ನದ ಊಟಹಾಕುವರು, ೬. ಇಳ್ಳೆಶಾಸ್ತ್ರ ಮಾಡುವುದು, ೭. ಒಪ್ಪುಶಾಸ್ತ್ರ ಮಾಡುವುದು. ಕೊಟ್ಟಿದ್ದೇ ಕೊಟ್ಟಿದ್ದು, ತಂದಿದ್ದೇ ತಂದಿದ್ದು ಎನ್ನಿಸುವುದು, ೮. ಶಾಸ್ತ್ರದ ಬತ್ತಕುಟ್ಟುವುದು. ೯. ಮದುವೆಗಂಡನ್ನು ಕರೆಯುವುದು. ೧೦. ರಾತ್ರಿ ಊಟ.

ಮದುವೆಯ ಮೂರನೆಯ ದಿನದ ಶಾಸ್ತ್ರಗಳು :

೧. ದೇವರು ತರುವುದು (ಚೊಕ್ಕ ಭೋಜನದವರಾದರೆ ಕೆರೆ, ಬಾವಿ, ನದಿಯಿಂದ ವಾದ್ಯಸಮೇತ ದೇವರುತರುವರು. ಮಾಂಸಾಹಾರಿಗಳಾದರೆ, ಛತ್ರಿ ಚಳೇವು ವಾದ್ಯ ವೀರಗಾಸೆ ಕಳಸ ಕನ್ನಡಿ ಕರಗ ಸಹಿತ ಹೆಣ್ಣು ಗಂಡಿನವರು ಒಟ್ಟಿಗೆ ನೀರಿರುವ ಸ್ಥಳಕ್ಕೆ ಹೋಗಿ ದೇವರು ತರುವರು). ೨. ಕಂಕಣ ಕಟ್ಟುವುದು. ೩. ಹಸೆ ಬರೆಯುವುದು. ೪. ಕಾಶಿಯಾತ್ರೆ, ೫. ಹೆಣ್ಣಿನ ಶಾಸ್ತ್ರ (ಧಾರೆಸೀರೆ ಉಡಿಸುವುದು, ಒಡವೆ ತೊಡಿಸುವುದು). ೫. ಹೆಣ್ಣಿನವರು ಗಂಡುಕರೆಯುವುದು. ೬. ಧಾರೆಗೆ ನಿಲ್ಲಿಸುವುದು. ೭. ಫಲಪೂಜೆ. ೮. ಹೆಣ್ಣು ಗಂಡು ಊರು ಮುಂದಿನ ದೇವಾಲಯಕ್ಕೆ ಹೋಗುವುದು. ೯. ಕಂಕಣಬಿಚ್ಚುವುದು. ೧೦. ಹೆಣ್ಣನ್ನು ಮುಂದಕ್ಕೆ ಕಳುಹಿಸುವುದು. ಮದುವೆ ಹೆಣ್ಣನ್ನು ಬಚ್ಚಿಡುವುದು. ೧೧. ಗಂಡು ಹೆಂಡತಿಯನ್ನು ತನ್ನ ಅವ್ವನ ಕೈಗೆ ಕೊಡುವುದು. ೧೨. ಮದುವೆ ಹೆಣ್ಣು ದೇವರುಬಿಡುವುದು. ಹೆಣ್ಣು ನೀರು ತುಂಬಿದ ಕಳಸತರುವುದು. ೧೩. ಗಂಡು ಚಪ್ಪರದ ಹಟ್ಟಿಯಲ್ಲಿ ಹೆಣ್ಣಿನಿಂದ ಕಳಸ ಈಸಿಕೊಳ್ಳುವುದು. ೧೪. ಮದುವೆ ಗಂಡಿನ ಮುಖ ತೊಳೆಯುವುದು. ೧೫. ಗಂಡಿನ ಪಾದ ತೊಳೆದು ಹೂ ಹರಿಶಿನ ಹಚ್ಚುವುದು. ೧೬. ಬೆಲ್ಲದಚ್ಚು ಮಂಗಳಾರತಿ ಬೆಳಗುವುದು. ೧೭. ಗಂಡು ಮಂಗಳಾರತಿ ತೆಗೆದುಕೊಳ್ಳುವುದು.

೧೮. ಧಾರೆ ಊಟ. ೨೦. ಗಂಡಿನ ಮನೆಯಲ್ಲಿ ಹೆಣ್ಣು ಗಂಡು ತಣ್ಣಿಗೆಗೆ ಬತ್ತ ಅಕ್ಕಿ ಎಸೆಯುವುದು. (ಆಹಾರಪದಾರ್ಥ ಉಕ್ಕಲಿ ಎಂಬುದು ಉದ್ದೇಶ). ೨೦. ಸೇರಿನಲ್ಲಿ ಅಕ್ಕಿ ತುಂಬಿ ಹೊಸ್ತಿಲ ಮೇಲಿಟ್ಟಿದ್ದನ್ನು ಹೆಣ್ಣು ಬಲಗಾಲಿನಿಂದ ಒದ್ದು ಒಳಪ್ರವೇಶಿಸುವುದು. ಗಂಡು ಸೇರನ್ನು ಎತ್ತಿ ಇಡುವುದು. ೨೧. ಹೆಣ್ಣು ಮೈನೆರೆದಿದ್ದರೆ ಹಣ್ಣುಕಾಯಿ ಹಾಕಿಸುವುದು (ವಿಷಯ ಪ್ರಚಾರ ಮಾಡುವುದು). ೨೨. ಗಂಡಿಗೆ ಭಾವಮೈದುನರು, ಸ್ನೇಹಿತರು ಓಕುಳಿ ಎರಚುವುದು. ೨೩. ಹೆಣ್ಣು ಮೈನೆರೆಯದಿದ್ದರೆ ಅನಂತರ ಒಸಗೆ ಮಾಡುವುದಾಗಿ ಸುದ್ದಿ ತಿಳಿಸುವುದು, ಗುಟ್ಟಿನಲ್ಲಿ ಓಕುಳಿ ಎರಚುವುದು. ನಗೆ ಹಾಸ್ಯ ಹಂಚಿಕೆ. ೨೪. ಊರಿನ ಈಶಾನ್ಯ ದಿಕ್ಕಿನಲ್ಲಿ ಹೆಣ್ಣಿನ ಕೈಹಿಡಿದು ನಿಮ್ಮ ಮಗಳು ಎಂದು ಗಂಡಿನವರಿಗೆ ಹೇಳಿ, ಕೊಡುವುದು, ೨೫. ಗಂಡಿನವರು ಗಂಡು ನಮ್ಮ ಮಗನಲ್ಲ ನಿಮ್ಮ ಮಗ ಎಂದು ಹೆಣ್ಣಿನವರಿಗೆ ಹೇಳುವುದು, ೨೬. ಕರ್ನೆರೆಯವರಾದರೆ ಸಸ್ಯಾಹಾರ, ಕಿರಗಂಚಿಯವರಾದರೆ ಮಾಂಸಾಹಾರ ಸೇವಿಸುವುದು. ೨೭. ಹೆಣ್ಣು ಗಂಡು ಕರೆಯುವುದು. ೨೮. ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಕರೆಯಲು ಹೋದಾಗ ಹಾಸ್ಯಪ್ರಸಂಗ. ಕರುಳುಹಾರ, ಕಣ್ಣುಕಂಟದ ಹಾರಹಾಕಿ ತಮಾಷೆಮಾಡುವುದು, ಪೇಚಿಗೆ ಸಿಕ್ಕಿಸುವುದು ಇತ್ಯಾದಿ.

ಇನ್ನೂ ಕೆಲವು ಶಾಸ್ತ್ರಗಳಿದ್ದು ಕಾಲಕ್ರಮೇಣ ಬಿಟ್ಟುಹೋದುವಂತೆ. ಮದುವೆಕಾರ್ಯದಲ್ಲಿ ಹತ್ತಿರದ ಬಂಧುಬಳಗದವರೆಲ್ಲ ಬಂದು ಸಹಕರಿಸುತ್ತಿದ್ದರು. ಎಲ್ಲಾ ಶಾಸ್ತ್ರಗಳಲ್ಲೂ ಹಾಡಿದ ಹೆಮ್ಮೆ ಕೃಷ್ಣೇಗೌಡನದು.

ಕೃಷ್ಣೇಗೌಡನಿಗೆ ಮದುವೆ ಆಯಿತು. ಹೆಂಡತಿಯ ಹೆಸರು ಪುಟ್ಟಮ್ಮ. ಮೂರು ಮಕ್ಕಳೂ ಆದವು; ಲೋಕೇಶ, ರಾಜೇಶ ಮತ್ತು ಜಯಲಕ್ಷ್ಮಿ. ಆದರೂ

ಮದುವೆಪದ ಹಾಡುವುದನ್ನು, ಜನಪದ ಕಲೆಗಳ ಆಸಕ್ತಿಯನ್ನು ಕಳೆದುಕೊಳ್ಳಲಿಲ್ಲ. ಬೇಸಾಯ, ಸಂಸಾರ ನಿರ್ವಹಣೆಯ ಜೊತೆಗೆ ಜಾನಪದ ಚಟುವಟಿಕೆ ಬದುಕಿನ ಪ್ರಧಾನ ಕಾಯಕವಾಯಿತು.

ಸೋಬಾನೆಪದ ಹಾಡುವುದು ಸಲೀಸಾದಂತೆ, ಹೆಸರು ಬಂದಂತೆ, ಕೃಷ್ಣೇಗೌಡ ತನ್ನದೇ ಆದ ಸೋಬಾನೆಪದ ತಂಡಕಟ್ಟಿದ. ಮೂವರು ಅಥವಾ ನಾಲ್ವರು ಮಹಿಳೆಯರು ಮತ್ತು ತಾನು ತಂಡದ ಸದಸ್ಯರು. ಆತನೇ ಮುಖಂಡ. ಆ ತಂಡದವರು ಹುಟ್ಟೂರು, ಅಕ್ಕಪಕ್ಕದ ಊರು, ರಾಜ್ಯದ ಇತರ ಕಡೆಯ ಊರು, ದೇಶದ ಹಲವು ಸ್ಥಳ, ವಿದೇಶದ ವಿವಿಧ ಭಾಗಗಳಲ್ಲೂ ಸಂಚರಿಸಿ ಸೋಬಾನೆ ಪದ ಹಾಡಿಹೆಸರು ಮಾಡಿತು. ಆರ್ಥಿಕ ಲಾಭವನ್ನೂ ಗಳಿಸಿತು. ಮದುವೆ ಸಂದರ್ಭಗಳಲ್ಲಷ್ಟೇ ಅಲ್ಲ, ಹೆಣ್ಣು ಮೈನೆರೆದು ಗುಡ್ಲು ಕೂಡಿದಾಗ, ಮಕ್ಕಳಿಗೆ ನಾಮಕರಣ ಮಾಡುವಾಗ, ಗೃಹಪ್ರವೇಶ ಆದಾಗ, ಊರಿನ ಹಬ್ಬ ಹರಿದಿನ ಜಾತ್ರೆಗಳಲ್ಲಿ ಹಾಡಿದರು. ಹರಿಜನ, ಹಕ್ಕಿಪಿಕ್ಕಿ, ಲಂಬಾಣಿ, ಕುರುಬರು, ವಾಜರು, ಅಗಸರು, ಆಚಾರರು, ನಾಯಕರು ಮೊದಲಾದವರ ಮದುವೆಗಳಲ್ಲೂ ಹಾಡಿವರು. ಹಾಡುಗಾರಿಕೆಗೆ ಜಾತಿ ಅಡ್ಡಿಯಾಗಲಿಲ್ಲ.

ಕರ್ನಾಟಕದ ಮಡಿಕೇರಿ, ಹಂಪೆ, ಧರ್ಮಸ್ಥಳ, ಗುಲ್ಬರ್ಗ, ಬೀದರ್, ಕೋಲಾರ, ಶೃಂಗೇರಿ, ಕೊಲ್ಲೂರು, ಚಿತ್ರದುರ್ಗ, ಸುತ್ತೂರು ಮಠ, ಮಲ್ಲಾಡಿ ಹಳ್ಳಿ, ಚುಂಚನಗಿರಿ, ಉಡುಪಿ, ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮೊದಲಾದ ಕಡೆಗಳಲ್ಲಿ ಹಾಡಿನ ಪ್ರದರ್ಶನ ನೀಡಿದರು. ಕೇರಳ (ಟ್ರಿವೆಂಡ್ರಮ್), ಮದರಾಸು (ತಿರುಚನಾಪಳ್ಳಿ) ದೆಹಲಿ, ಗೋವ, ಪುಣೆ, ಮುಂಬಯಿ, ನೈನಿತಾಲ್, ಉತ್ತರಪ್ರದೇಶ, ಆಂಧ್ರಪ್ರದೇಶ, ಪಾಂಡಿಚೆರಿ,

ಅಂಡಮಾನ್, ತಿರುಪತಿ, ನೇಪಾಳ ಮುಂತಾದ ಸ್ಥಳಗಳಲ್ಲಿ ಪ್ರದರ್ಶನ ನಡೆಯಿತು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಕೃಷ್ಣೇಗೌಡ, ಹನುಮಮ್ಮ, ಕಲ್ಯಾಣಮ್ಮ, ತಾಯಮ್ಮ, ದೇವಮ್ಮ-ಸೋಬಾನೆ ತಂಡ ದಕ್ಷಿಣ ಅಮೆರಿಕಾ ಪ್ರಾವಾಸ ಕೈಗೊಂಡಿತು (೧೯೯೮). ಅರಿಜೋನಾ, ಫೀನಿಕ್ಸ್, ನ್ಯೂಯಾರ್ಕ್, ವಾಷಿಂಗ್‌ಟನ್, ಸ್ಯಾನ್‌ಫ್ರಾನ್ಸಿಸ್ಕೋ, ಪಿಟ್ಸ್‌ಬರ್ಗ್, ರ್‍ಯಾಲೆ, ಫ್ಲಿಂಟ್, ಫ್ಲಾರಿಡಾ, ಸ್ಯಾನೋಸೇ, ಬೋಸ್ಟನ್, ನ್ಯೂ ಇಂಗ್ಲೆಂಡ್, ಚಾರ್ಲ್ಸ್‌ಟನ್ ಮತ್ತು ಡೆಟ್ರಾಯಿಟ್‌ಗಳಲ್ಲಿ ಸೋಬಾನೆ ಗೀತಗಾಯನ ನಡೆಯಿತು. ಕರ್ನಾಟಕದ ಸೋಬಾನೆ ಪದಗಳನ್ನು ವಿದೇಶದಲ್ಲೂ ಹಾಡಿದ ಕೀರ್ತಿ ಕೃಷ್ಣೇಗೌಡನ ತಂಡಕ್ಕೆ ಲಭಿಸಿತು. ವಿದೇಶ ಪ್ರವಾಸದಿಂದ 'ಅಂತರರಾಷ್ಟ್ರೀಯ ಸೋಬಾನೆ ಕೃಷ್ಣೇಗೌಡ' ಎಂದು ಪ್ರಸಿದ್ಧನಾದ.

ಕರ್ನಾಟಕದಲ್ಲಿ ಮದುವೆ ಪದಗಳು ಮಹಿಳೆಯರ ಸ್ವತ್ತು. ಪುರುಷರು ಕೇವಲ ಕೇಳುಗರು ಅಷ್ಟೇ. ಆದರೆ ಕೃಷ್ಣೇಗೌಡ ಸೋಬಾನೆ ಪದಗಳನ್ನು ಕಲಿತು ಹಾಡಿದ ಮೊದಲ ಗಂಡಸು. ಸೋಬಾನೆ ಪದಗಳಿಗೆ ವಿಶ್ವವ್ಯಾಪಕತೆ ತಂದುಕೊಟ್ಟ ಕೀರ್ತಿಯೂ ಅವನದೇ. ಕನ್ನಡದಲ್ಲಿ ಸೋಬಾನೆ ಪದಗಳ ತಂಡ ಹುಟ್ಟಲು, ಹಲವು ಸ್ತ್ರೀಪುರುಷರು ತರಬೇತಿಪಡೆಯಲು ಅವನೇ ಕಾರಣನಾದ. ಸೋಬಾನೆ ಕೃಷ್ಣೇಗೌಡ ಎಂಬ ಸಾರ್ಥಕ ಶಿರೋನಾಮೆ ಗಳಿಸಿದ. ಬೆಂಗಳೂರು, ಮೈಸೂರು ಆಕಾಶವಾಣಿ ಕೇಂದ್ರಗಳಿಂದಲೂ ದೂರದರ್ಶನ ನಿಲಯದಿಂದಲೂ ಅವನ ತಂಡದ ಹಾಡುಗಾರಿಕೆ ಪ್ರಸಾರವಾಯಿತು.

ಕೃಷ್ಣೇಗೌಡ ಸೋಬಾನೆ ಪದಗಳನ್ನಷ್ಟೇ ಕಲಿಯಲಿಲ್ಲ, ಇತರ ಹಾಡುಗಳನ್ನೂ ಕಲಿತ. ಅವುಗಳಲ್ಲಿ ಮುಖ್ಯವಾದವು ಹೀಗಿವೆ : ಬೀಸುವ ಪದ, ನಾಟಿಪದ, ರಂಗದಪದ, ಸುಗ್ಗಿಪದ, ದೂರಿಪದ, ಲಾಲಿಹಾಡು, ತಿಂಗಳು ಮಾವನಪದ, ಧರ್ಮರಾಯನಪದ, ಕಗ್ಗಲಿಪದ, ಹಾಸ್ಯದ ಪದ, ಅಣ್ಣತಮ್ಮಂದಿರ ಪದ, ಅತ್ತಿಗೆ ನಾದಿನಿಯರ ಪದ, ಒಗಟುಪದ ಇತ್ಯಾದಿ.

ಕೃಷ್ಣೇಗೌಡ ತನ್ನ ಹದಿನೈದನೇ ವಯಸ್ಸಿನಿಂದ ಜನಪದಗೀತೆ ಹಾಡಲು ಪ್ರಾರಂಭಿಸಿದ. ಜೊತೆಜೊತೆಗೆ ಹಾಡುಗಾರಿಕೆಗಾಗಿ ಬಹುಮಾನಗಳನ್ನೂ ಪಡೆದ. ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಯುವಜನ ಮೇಳದಲ್ಲಿ ಜನಪದ ಗೀತ ಗಾಯನಕ್ಕೆ ಪ್ರಥಮ ಬಹುಮಾನ ಗಳಿಸಿದ. ದೆಹಲಿಯಲ್ಲಿ ಗಣರಾಜ್ಯದಂದು ಜನಪದ ಗಾಯಕನಾಗಿ ಭಾಗವಹಿಸಿದ (೧೯೮೩). ಆಸಕ್ತ ವಿದ್ಯಾರ್ಥಿಗಳಿಗೆ ಗೀತಗಾಯನ ತರಬೇತಿ ನೀಡಿ ಬೆಂಗಳೂರು ವಿಶ್ವವಿದ್ಯಾಲಯದ ಕಲ್ಚರಲ್ ಚಾಂಪಿಯನ್ ಬಹುಮಾನಕ್ಕೆ ಪಾತ್ರನಾದ (೧೯೮೩). ಅನೇಕ ಸಂಘ ಸಂಸ್ಥೆಗಳಿಂದ, ಗುರು ಮಠಗಳಿಂದ ಸನ್ಮಾನ ಪಡೆದ. ಅವುಗಳಲ್ಲಿ ಸುತ್ತೂರು ಮಠ, ಚಿತ್ರದುರ್ಗದ ಮುರುಗರಾಜೇಂದ್ರ ಮಠ, ಧರ್ಮಸ್ಥಳ, ಆದಿಚುಂದನಗಿರಿ ಮಠ ಮುಖ್ಯವಾದವು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನಡೆಸಿದ 'ರಾಜ್ಯ ಜಾನಪದ ಕರಕುಶಲ ಕಾರ್ಯಾಗಾರ' (೧೯೯೩), ರಾಜ್ಯ ಮಟ್ಟದ ವೇಷಭೂಷಣ ಕಾರ್ಯಾಗಾರ (೧೯೯೪), ರಾಜ್ಯಮಟ್ಟದ ಗೀತಗಾಯನ ತರಬೇತಿ (೧೯೯೫, ೧೯೯೬) – ಗಳ ನಿರ್ದೇಶಕನಾಗಿ ಕೃಷ್ಣೇಗೌಡ ಸಾರ್ಥಕ ಸೇವೆ ಸಲ್ಲಿಸಿದ.

ಕೃಷ್ಣೇಗೌಡನ ಜಾನಪದ ಚಟುವಟಿಕೆಗಳನ್ನು ಗುರುತಿಸಿದ ರಾಜ್ಯ ಸರ್ಕಾರ, ಮಂಡ್ಯ ಜಿಲ್ಲಾ ಪ್ರತಿನಿಧಿಯಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯನನ್ನಾಗಿ ನೇಮಿಸಿ ಗೌರವಿಸಿತು. ಆ ಸಂದರ್ಭದಲ್ಲಿ ಕೃಷ್ಣೇಗೌಡ ಅರ್ಥಪೂರ್ಣವಾಗಿ ಕಾರ್ಯನಿರ್ವಹಿಸಿದ. ಅನೇಕ ಅಭಿಜಾತ ಕಲಾವಿದರಿಗೆ ಅಕಾಡೆಮಿಯಿಂದ ಸಹಾಯ ದೊರಕುವಂತೆ ಮಾಡಿದ. ಇನ್ನೂರ ಐವತ್ತು ಗ್ರಾಮೀಣ ಕಲಾವಿದರಿಗೆ ಮಾಸಾಶನ, ಆರು ಜನಕ್ಕೆ ಅಕಾಡೆಮಿ ಪ್ರಶಸ್ತಿ ದೊರಕಲು ಕಾರಣನಾದ. ಕೃಷ್ಣೇಗೌಡನಿಂದ ನೆರವು ಪಡೆದ ಕೆಲವು ಕಲಾವಿದರ ಹೆಸರು ಹೀಗಿವೆ : ಹುಚ್ಚಯ್ಯ, ಹರಿಜನ, ಗಂಗೇನಹಳ್ಳಿ ನಾಗಮಂಗಲ ತಾಲ್ಲೂಕು; ರವಿಗೌಡ, ಒಕ್ಕಲಿಗ, ಹಿರಿಮಳ್ಳಿ; ಜಯರಾಮು, ದಾಸ ಒಕ್ಕಲಿಗ, ಸುಂಕ ತೊಣ್ಣೂರು; ಜಯಮ್ಮ, ಹರಿಜನ, ಚಂದಗಾಲು, ಮಂಡ್ಯ ತಾಲ್ಲೂಕು; ಕೆಂಪಮ್ಮ, ಹರಿಜನ, ನರಹಳ್ಳಿ; ಬೀರಮ್ಮ, ಕುರುಬ, ಕುರುಬರ ಕೊಪ್ಪಲು, ಪಾಂಡವಪುರ ತಾಲ್ಲೂಕು; ಬಸಪ್ಪ, ಶೆಟ್ಟಿ (ವೈಶ್ಯ), ಮೈಸೂರು; ದೇವಮ್ಮ, ಲಿಂಗಾಯಿತ, ಕೀಲಾರ; ರತ್ನ ಬೆಸಗರಹಳ್ಳಿ; ತಿಮ್ಮಮ್ಮ, ಮಾದಿಗ, ಕೊಂತಿಬೆಟ್ಟ; ಶಾಂತ, ಹರಿಜನ, ವದೆಸಂದ್ರ ಕೊಪ್ಪಲು (ಹುಲಿಕೆರೆ ಬುಗ); ಕೃಷ್ಣೇಗೌಡ, ಹೆಗ್ಗಡಹಳ್ಳಿ; ಅರಸಮ್ಮ, ಹರಿಜನ, ಮಾದೇಶ್ವರ ತಂಡ; ಸೋಮಣ್ಣ, ಗೌಡರು, ಕೆರೆತೊಣ್ಣೂರು ತಂಡ; ದೇವಮ್ಮ, ಗೌಡ, ಲಕ್ಷ್ಮೀಸಾಗರ ತಂಡ ಇತ್ಯಾದಿ.

ಸೋಬಾನೆ ಪದಗಳ ಗೀತಗಾಯನಕ್ಕೆ ಆಕರ್ಷಿತನಾದ ಕೃಷ್ಣೇಗೌಡ ಆ ಕಲಾಪ್ರಕಾರವನ್ನು ಉಳಿಸಿಕೊಳ್ಳಲು ಸುಮಾರು ಒಂದು ನೂರು ಸೋಬಾನೆ ತಂಡ ಕಟ್ಟಿ ತರಬೇತಿನೀಡಿದ. ಆಕಾಶವಾಣಿ ಗೀತಗಾಯನಕ್ಕಾಗಿ ಇಪ್ಪತ್ತು ತಂಡ ಕಟ್ಟಿದ. ಅವುಗಳಲ್ಲಿ ಕೆಲವು ಹೆಂಗಸರು ಮತ್ತು ಗಂಡಸರಿಗೆ ಪ್ರತ್ಯೇಕ

ತಂಡಗಳಾಗಿದ್ದವು. ಕೆಲವು ಹೆಂಗಸರು ಗಂಡಸರು ಜೊತೆಗೂಡಿದ ತಂಡಗಳು. ಅವನ ತಂಡಗಳು ಹೋದ ಕಡೆಗಳಲ್ಲೆಲ್ಲಾ ಹೆಸರುಮಾಡಿದವು. ಕೃಷ್ಣೇಗೌಡ ತಾನು ಕಟ್ಟಿದ ತಂಡಗಳ ಕಲಾವಿದರನ್ನು ವರ್ಷಕ್ಕೊಮ್ಮೆ ಒಟ್ಟಿಗೆ ಸೇರಿಸಿ ಕಾರ್ಯಕ್ರಮ ನೀಡಲು ಅವಕಾಶ ಕಲ್ಪಿಸುತ್ತಿದ್ದ. ಉತ್ತಮ ಕಲಾವಿದರಿಗೆ ಶಾಲುಹೊದಿಸಿ ಸನ್ಮಾನಿಸಿ ಪ್ರೋತ್ಸಾಹಿಸುತ್ತಿದ್ದ.

ಕೃಷ್ಣೇಗೌಡನಿಗೆ ಸೋಬಾನೆ ಹಾಡಿನ ದನಿ ಬನಿ, ರಾಗಧಾಟಿ ತಾಳಲಯ ಕರಗತವಾಗಿದ್ದವು. ಹಿಂದಿನ ಧಾಟಿಯನ್ನು ಅನುಸರಿಸಿ, ಸಮಯ ಸಂದರ್ಭ ನೋಡಿಕೊಂಡು, ತಾನೇ ಹೊಸ ಹಾಡುಗಳನ್ನು ರಚಿಸಿ ಹಾಡುತ್ತಿದ್ದ. ಉದಾಹರಣೆಗೆ ಕೆಲವು ಹಾಡುಗಳನ್ನು ಪರಿಭಾವಿಸಬಹುದು :

ಸೋಬಾನವೆಲ್ಲ ಶಿವನಿಗೆ ‖ಪಲ್ಲವಿ‖

ಸೋಬಾನ ಅನ್ನಕು ಮೊದಲೇ ತಾ ಬಂದು ಮದುವಣ್ಣ
ಅತ್ತಿತ್ತ ನೋಡಿ ಸನ್ನೆಯಿಂದ –ಅತ್ತೆಮಗ
ಬಾ ಅಂದ ಅವನ ಮಡದೀಯ.

ಸೋಬಾನ ಅನ್ನೋದು ಸುಲಭವಲ್ಲ ಮದುವಣ್ಣ
ಇನ್ನು ಮೇಲೆ ನೋಡೋ ನಿನ ಪಾಡ –ಅತ್ತೆಯ ಮಗಳು
ಒತ್ತೊತ್ತರಿಸಿ ಬಂದಳು ಬಲಗಡೆ.

ಅಂಗೈಯ ಚಂದಕೆ ಮುಂಗೈಯ ಹಿಡಿಕಂಡ
ರಂಗಾದ ದೇವರ ಎದುರಲ್ಲಿ –ಮದುವಣ್ಣ
ರಂಬೆಯ ಹಿಡಿಮು ಕರತಂದ.

ಏರಿಯ ಕೆಳಗೆ ಆರೇಳು ದೇವಸ್ಥಾನ
ಆರೂರಿಗೊಬ್ಬ ಬಸವಯ್ಯ –ಗುಡಿಮುಂದೆ
ಅಂದಕೆ ಮಣೆಹಾಕಿ ಹಸೆನಿಲ್ಲೊ.

ಮಣೆಮೇಲೆ ನಿಂತುಕೊಂಡು ಮಣೆ ಏನ ನೋಡಿಯೇ
ಮನೆಯೋಳ ನೋಡು ಬಲಗಡೆ – ಮದುವಣ್ಣ
ಹಸಿ ಅಡಕೆ ಸಿಪ್ಪೆ ಸುಲಿದಂಗೆ.

ಮುಂದೆ ಅತ್ತೆ ಬಳಗ ಹಿಂದೆ ಅಪ್ಪನ ಬಳಗ
ಮಧ್ಯದಲವನೇ ಮದುವಣ್ಣ –ಈ ಊರವರು
ಬಗ್ಗಿ ನೋಡಾರು ಅಳಿಯನ.

ಬಾಲೇನ ಹಿಡಿಕಂಡು ಬಳಗವ ಕರಕಂಡು
ನಿಲ್ಲಾದೆ ಬಂದ ನಿನ್ನಳಿಯ –ಹೆಣ್ಣೊರವ್ವ
ಅವಳೇ ನಿನ್ ಮಗಳ ಕರಸಮ್ಮ.

ಹಟ್ಟಿಲಿ ನಿಂತಿಕಂಡು ಬತ್ತ ಎಸೆಯೋಳ್ಯಾರೆ
ಶೆಟ್ಟಿ ನಮ್ ಬೀಗರ ಬಳಗಕ್ಕೆ –ಹೆಣ್ಣೊರವ್ವ
ಮುತ್ತು ಎಸಿಯಮ್ಮ ಬೈತಾರೆ.

ಮುತ್ತು ಎಸೆಯೆಂದರೆ ಬತ್ತಯಾಕೆ ಎಸೆದಿಯೆ?
ಮುತ್ತುಯಿಲ್ಲದ ಬಡವರೇ –ನಿಮ್ಮ ಬಳಗ
ಸಾಲ ಕೊಡುತೀನಿ ಬಾರೆ ಸಣ್ಣ ಮುತ್ತ.

ಬೀಗರನ್ನು ಜರೆಯುವ ಸನ್ನೆಪದಗಳಲ್ಲಿ ಕೃಷ್ಣಗೌಡನ ಸ್ವರಚನೆಗಳು ಹೀಗಿರುತ್ತಿದ್ದವು. ಉದಾಹರಣೆಗೆ :

ಒಂದಡಿಕೆ ತಂದು ಒಂಬೈನೂರು ಚೂರೊಡೆದು
ಬಂದವರಿಗೆ ಕೊಟ್ಟೆ ಸಭೆಗೆ ಕೊಟ್ಟೆ – ಮಿಕ್ಕಡಕೆ
ಹಂಗರಳ್ಳಿಯವರಿಗೆ ನೀನಂಗೆ ಕೊಟ್ಟೆ.

ಹಂಗರಳ್ಳಿಯವರಿಗೆ ಅಂಗೆಕೊಟ್ಟೆ –ಮಿಕ್ಕಡಿಕೆ
ಸಾತನೂರವರಿಗೆ ಸಾಲಕೊಟ್ಟೆ –ಮಿಕ್ಕಡಿಕೆ
ಒಡ್ಡರಳ್ಳಿಯವರಿಗೆ ಬಡ್ಡಿಕೊಟ್ಟೆ –ಮಿಕ್ಕಡಿಗೆ
ಕಾಳೇನಳ್ಳಿಯವರಿಗೆ ಕಡಕೊಟ್ಟೆ –ಮಿಕ್ಕಡಿಗೆ
ಮಡಿಕಂಡ್ಯೇಕೆ ನೋಡ್ಯೇ ಮನೆಯಲ್ಲಿ?

ಒನಕೆ ಮುಂಡಿನಂಗೆ ನಿನ ಕಣಗಾಲು ಮಡಿಕಂಡು
ಗಣಕೆಯ ಪತ್ರೆ ಮುಡಿಕಂಡು –ಹೆಣ್ಣೊರವ್ವ
ಪಣಕ ಪಣಕನೆ ತಿರುಗೀಯೆ!

ಅನ್ನ ಇಕ್ಕೊಂದ್ರೆ ಅಡ್ಡಗೋಳ ಬತ್ತೀಯೆ
ಎಲೆಯ ಕೊಡು ಅಂದ್ರೆ ಎಗರಿ ಎಗರಿ ಬೀಳ್ತೀಯೆ
ಆಯತ್ವಾರ ಸಂತೆ ಅಷ್ಟಕ್ಕೆ ತಂದೋಳೆ
ಕೊಚ್ಚಾಳು ತಾಳೇ ಕ್ವಾಣೀಲಿ –ನಿನ್ನವ್ವ
ಇಕ್ಕಾಳೋ ಇಲ್ವೋ ಶಿವಬಲ್ಲ!

ಮನೆಯ ನೋಡಿರಿ ಮನೆಯ ಪಡಸಾಲೆಯ
ಮನೆಯೋಳವರವ್ವ ಗುಣವಂತೆ –ಆದಾರೆ
ಕೊಡಬಹುದು ಹೆಣ್ಣ ತರಬಹುದು.

ವಜ್ರದೋಲೆಗೆ ಗೆಜ್ಜೆಮುತ್ತು ಉಡಿಸಿರಿ
ವಾಜನಿಗೆ ಕೊಟ್ಟು ಒಳನಂಚ –ಹೆಣ್ಣೋರವ್ವ
ವಾಲೆ ಮೇಲೊಂದು ಬರೆದೀವಿ
ನಮ್ಮ ಗಂಡಿಗೆ ವನವಾಸ ಬರದಂಗೆ.

ಕೃಷ್ಣೇಗೌಡ ಕಟ್ಟಿದ ಈರುಳ್ಳಿ ಓನ್ನೆಲೆಯ ಹಾಡೊಂದು ಹೀಗಿದೆ:

ಈರುಳ್ಳಿ ಹೂವಾದೋ ಈರುಳ್ಳಿ ಕಾಯಾದೋ
ಈರುಳ್ಳಿ ಜ್ಯೋತಿ ಮುರಿಲಾದೋ –ಈ ಊರೋರ
ನೀರಿಗ್ಯಾಕಾಗಿ ಹೋಯ್ತೀರಿ?

ಇತ್ತ ಬನ್ನಿ ಅಂದ್ರೆ ಅವರತ್ತತ್ತ ಹೋಯ್ತಾರೆ
ಈರುಳ್ಳಿ ಕೂದ ವಾಸನೇಗೆ –ಬೆದರಿಕಂಡು
ಇಳ್ಳೆಲಗಬ್ಬು ಅವರ್ಬಟ್ಟೆ.

ಅವಳ್ಯಾಕ್ ಅಂಗಾಡಿ ಒಳಗ್ಯಾಕ್ ಓಂಗ್‌ನೋಡಿ
ಅವರೆಕಾಯಿ ಕೂದೋಳೆ –ಹೆಣ್ಣೋರವ್ವ
ಹೊಲಸಿನ ಸೊನೆಯಲ್ಲೆ ನಿನ್ನ ಸೀರೆಲ್ಲ –ಹೆಣ್ಣೋರವ್ವ
ನಿನ್ನ ವಾಣಿ ನೋಡಾರು ಒಳಿಕ್ಹೋಗೆ.

ಕಂಬ ತಬ್ಬಿದ್ದಿ ಕಂಡೆಲ್ಲ ಬುಟಗಟ್ಟು
ಆಗ ನೋಡಪ್ಪ ಆ ಮನೆ ಗರತೀಯ –ಹೆಣ್ಣೋರವ್ವನ
ಬಂದ್ರ ಅನ್ನು ಸೊಲ್ಲು ಒಬ್ಬರಿಲ್ಲ.

ಕೃಷ್ಣೇಗೌಡನಲ್ಲಿ ಇಂಥ ಹಾಡುಗಳು ರಾಶಿರಾಶಿಯಾಗಿದ್ದವು. ದುರದೃಷ್ಟವಶಾತ್ ಆ ಹಾಡುಗಳನ್ನು ಯಾರೂ ಸಂಪೂರ್ಣವಾಗಿ ಸಂಗ್ರಹಿಸಲಿಲ್ಲ.

ಕೊರವಂಜಿ ಕೃಷ್ಣೇಗೌಡ

ಕೃಷ್ಣೇಗೌಡ ಬಹುಮುಖ ಪ್ರತಿಭೆಯ ಅಭಿಜಾತ ಕಲಾವಿದ. ಸೋಬಾನೆ ಹಾಡುಗಾರಿಕೆಯ ಜೊತೆಗೆ ಕೋಲಾಟ ಕಲಿಕೆಯಲ್ಲೂ ಆಸಕ್ತಿ ಬೆಳೆಸಿಕೊಂಡ. ಗ್ರಾಮದೇವತೆ ಹಬ್ಬದಲ್ಲಿ ರಂಗಕಟ್ಟುವಾಗ ನಡೆಯುತ್ತಿದ್ದ ರಂಗದ ಕುಣಿತ ನೋಡುತ್ತಿದ್ದ. ತಾನೂ ಹೆಜ್ಜೆಹಾಕುತ್ತಿದ್ದ. ಊರಿನ ಯುವಕರು ಬೆಳದಿಂಗಳ ರಾತ್ರಿಯಲ್ಲಿ ಕೋಲಾಟ, ದೊಣ್ಣೆವರಸೆ ಕಲಿಯುತ್ತಿದ್ದುದನ್ನು ನೋಡಿ ತಾನೂ ಕಲಿಯಲು ಮನಸ್ಸುಮಾಡಿದ. ಮೈಸೂರು ಮಹಾರಾಜರು ಚಿನಕುರುಳಿ ಗ್ರಾಮದ ಹತ್ತಿರದ ಬೇಬಿಬೆಟ್ಟದ ಬೇಬಿಜಾತ್ರೆಯಲ್ಲಿ ಕೋಲಾಟದ ಸ್ಪರ್ಧೆ ಏರ್ಪಡಿಸಿ ಅತ್ಯುತ್ತಮ ತಂಡಕ್ಕೆ ಬೆಳ್ಳಿಕೋಲುಗಳನ್ನು ಬಹುಮಾನವಾಗಿ ಕೊಡುತ್ತಿದ್ದರು. ಅದು ಯುವಕರಿಗೆ ದೊಡ್ಡ ಆಕರ್ಷಣೆ. ಅದಕ್ಕೆ ಕೃಷ್ಣೇಗೌಡನೂ ಹೊರತಾಗಲಿಲ್ಲ. ಹದಿನೈದನೇ ವಯಸ್ಸಿಗೇ ಕೋಲಾಟದಲ್ಲೂ ಆಸಕ್ತಿ ಬೆಳೆಯಿತು. ಆಗ ಕೋಲಾಟ ಕಲಿಯಲು ಎಂಟು ರೂಪಾಯಿ ಶುಲ್ಕ ಕೊಡಬೇಕಾಗಿತ್ತು. ಅಷ್ಟು ಹಣ ಕೊಡಲು ಆಗದೆ ಆಡುತ್ತಿದ್ದವರನ್ನು ನೋಡಿ ಕಲಿಯಲು ಪ್ರಾರಂಭಿಸಿದ. ಲಕ್ಷ್ಮೀಸಾಗರದ ಸುತ್ತಮುತ್ತಲ ಊರುಗಳ ಯುವಕರಿಗೆಲ್ಲಾ ಕುಂಟಯ್ಯ ಕೋಲಾಟದ ಗುರು. ಅವನು ಕಂಚಿನ ತಾಳ, ದಮ್ಮಡಿಯನ್ನು ಸೊಗಸಾಗಿ ನುಡಿಸುತ್ತಿದ್ದ. ಅವನ ಶಿಷ್ಯರು ಅಪಾರ.

ಕೃಷ್ಣರಾಜಪೇಟೆ ಮೆಣಸುಗ್ರಾಮದ ಹರಿಜನರ ಕುಂಟಯ್ಯ ಕಡುಬಡವ. ಒಮ್ಮೆ ಬಟ್ಟೆ ತೊಟ್ಟರೆ ಹರಿದುಹೋಗುವವರೆಗೆ ಬದಲಾಯಿಸಲು ಆಗದಷ್ಟು ಬಡವ. ಬಟ್ಟೆಗಳ ತುಂಬ ಕೂರೆಗಳ ದಂಡು. ಆಗಾಗ ತೊಣ್ಣೂರು ಕೆರೆಗೆ ಹೋಗಿ, ಸ್ನಾನಮಾಡಿ, ಬಟ್ಟೆ ಒಗೆದು, ಒದ್ದೆ ಬಟ್ಟೆಯನ್ನೇ ಧರಿಸಿ ಬಿಸಿಲಿನಲ್ಲಿ

ಒಣಗಿಸಿಕೊಳ್ಳುತ್ತಿದ್ದ. ಎಷ್ಟೇ ಸೋಸಿದರೂ ಕೂರೆಗಳು ಕಡಮೆಯಾಗುತ್ತಿರಲಿಲ್ಲ. ಅಂಥ ನಿರ್ಗತಿಕನಲ್ಲಿ ಕೋಲಾಟದ ಎಲ್ಲಾ ವರಸೆಗಳೂ ನೆಲಸಿದ್ದವು. ಕುಂಟಯ್ಯ ಆರು ತಿಂಗಳು ಕಾಲ ಲಕ್ಷ್ಮೀ ಸಾಗರದಲ್ಲಿದ್ದು ಯುವಕರಿಗೆ ಕೋಲಾಟ ಕಲಿಸುತ್ತಿದ್ದ. ಆ ಗುರು ಕಲಿಸುತ್ತಿದ್ದ ಕೋಲಾಟವನ್ನು ಏಕಲವ್ಯನಂತೆ ನೋಡಿ ಕೃಷ್ಣೇಗೌಡ ಕಲಿಯುತ್ತಿದ್ದ. ಕೋಲಾಟ ತಂಡದಲ್ಲಿ ಯಾರಾದರೂ ಬರದೇ ಇದ್ದಾಗ, ನಿತ್ಯ ಬಂದು ನೋಡುತ್ತಿದ್ದ ಕೃಷ್ಣೇಗೌಡನನ್ನು ಕರೆದು ಅವಕಾಶ ಕೊಡಲಾಗುತ್ತಿತ್ತು.

ಕುಂಟಯ್ಯನ ಬಡತನವನ್ನು ಕಣ್ಣಾರೆ ಕಂಡಿದ್ದ ಕೃಷ್ಣೇಗೌಡ ತಾನೂ ಬಡವನಾದರೂ ಹೇಗೋ ಐದು ಆಣೆ ಹೊಂದಿಸಿ ಜಕ್ಕನಹಳ್ಳಿಗೆ ಹೋಗಿ ಒಂದು ಅಂಗಿಯನ್ನು ತಂದು ಕುಂಟಯ್ಯನಿಗೆ ಕೊಟ್ಟ. ಬಡಗುರುವಿಗೆ ಪರಮಾನಂದವಾಯಿತು. ಕೋಲಾಟದಲ್ಲಿ ಆಸಕ್ತಿಯಿದ್ದ ಕೃಷ್ಣೇಗೌಡನನ್ನು ತಂಡಕ್ಕೆ ಸೇರಿಸಿಕೊಂಡು ತರಬೇತಿ ನೀಡಿದ. ಕೃಷ್ಣೇಗೌಡ ಗುರು ಕುಂಟಯ್ಯನ ಶಿಷ್ಯನಾದ.

ಹಾಸನದ ಗಿಡ್ಡೇಗೌಡ ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲಾ ಕೋಲಾಟದಲ್ಲಿ ಹೆಸರುವಾಸಿ. ಕೃಷ್ಣೇಗೌಡ ಆ ಕೋಲಾಟಪಟುವಿನಿಂದಲೂ ಹೆಚ್ಚಿನ ತರಬೇತಿ ಪಡೆದ. ಎಲ್ಲಿ ಯಾರು ಕೋಲಾಟ ಕಲಿಸುತ್ತಿದ್ದರೋ ಅಲ್ಲೆಲ್ಲಾ ಹೋಗಿ ಅವರ ಸೇವೆಮಾಡಿ ಕೋಲಾಟ ಕಲಿತು, ಒಂದುನೂರಕ್ಕೂ ಅಧಿಕ ಕೋಲಾಟ ವರಸೆಗಳಲ್ಲಿ ಪರಿಣತನಾದ.

ಗ್ರಾಮೀಣ ಪ್ರದೇಶಗಳಲ್ಲಿ ಕೋಲಾಟ ಪ್ರದರ್ಶನ ನಾನಾ ಕಾರಣಗಳಿಂದ ರೂಢಿಗೆ ಬಂದಿದೆ. ಮನೋರಂಜನೆ, ದೇಹದಾರ್ಢ್ಯ ಗಳಿಕೆ,

ಕೋಲಾಟದ ಪ್ರಮುಖ ಪ್ರಯೋಜನಗಳಾಗಿವೆ. ಅದಕ್ಕೆ ಧಾರ್ಮಿಕ ಸಾಂಸ್ಕೃತಿಕ ಆಯಾಮವೂ ಉಂಟು. ಮಳೆಗಾಗಿ ಕಪ್ಪೆಮದುವೆ ಮಾಡುವಂತೆ, ಮಳೆ ಬರಲಿ ಎಂದು ಕೋಲಾಟ ಪ್ರದರ್ಶನ ಏರ್ಪಡಿಸುವುದೂ ಪ್ರಚಲಿತವಾಗಿದೆ. ಹಣಕೊಟ್ಟು ಕೋಲಾಟ ಆಡಿಸುವುದೂ ಉಂಟು. ಗ್ರಾಮದೇವತೆ ಮೆರವಣಿಗೆ, ಹಬ್ಬಹರಿದಿನ, ಜಾತ್ರೆಪರಿಷೆಗಳಲ್ಲಂತೂ ಕೋಲಾಟದ ತಂಡಗಳ ಪ್ರದರ್ಶನ ಇದ್ದೇಇರುತ್ತದೆ. ಲಂಬಾಣಿ ಹೆಂಗಸರೂ ಕೋಲಾಟ ಆಡುತ್ತಿದ್ದರು. ಲಕ್ಷ್ಮೀಸಾಗರದ ಯುವಕರು ಹೆಂಗಸರಿಗಿಂತ ತಾವೇನು ಕಡಮೆಯೆಂದು ಕೋಲಾಟ ಕಲಿತು ಪ್ರದರ್ಶಿಸಲು ಮುಂದಾದರು. ಜೊತೆಗೆ ಪ್ರತಿಯೊಂದು ಕೋಲಾಟಕ್ಕೂ ಹೊಂದುವ ಕೋಲಾಟದ ಪದಗಳನ್ನು ಕಲಿತರು.

ಕಣದಲ್ಲಿ ರಾಗಿಹುಲ್ಲು ಬಡಿಯುವಾಗ, ರಾಗಿ ಗುನಿ, ಇಲುಕು ಒಕ್ಕಣೆ ಮಾಡುವಾಗ ಕೃಷ್ಣೇಗೌಡನಿಗೆ ಕೋಲಾಟದ ಕ್ರಿಯೆ ಅನುಕರಿಸುವ ಅನುಭವವಾಗುತ್ತಿತ್ತು. ರಾಗಿಹುಲ್ಲು ಬಡಿಯುವ ಕ್ರಿಯೆಯೇ ಕೋಲಾಟದ ಮೂಲ ಎನ್ನುತ್ತಿದ್ದ. ಎರಡು ಕೈ ಕೋಲುಗಳು ಬಡಿದಾಗ ಉಂಟುಮಾಡುವ ಶಬ್ದಕ್ಕೆ ಹೊಂದುವಂತೆ ಹಾಡುಕಟ್ಟಿ ಹಾಡುತ್ತಿದ್ದ. ಕೋಲಾಟಕ್ಕೂ ಕೋಲಾಟಪದ ಸೃಷ್ಟಿಗೂ ಕೃಷಿಕಾಯಕವೇ ಕಾರಣವೆಂಬುದು ಅವನ ನಂಬಿಕೆ. ರಾಗಿ ಒಕ್ಕಣೆಯಿಂದ ದೊಣ್ಣೆ ವರಸೆ ಹುಟ್ಟಿತು, ಕಂಚಿನ ತಣ್ಣಿಗೆ ಉಜ್ಜುವುದರಿಂದ ಕಂಸಾಳೆನಾದ ಬಂತು, ಒಕ್ಕುವ ಕಣ ಜನಪದ ಕಲೆಗಳ ಹುಟ್ಟಿನ ನೆಲೆ ಎಂದು ಕೃಷ್ಣೇಗೌಡ ವ್ಯಾಖ್ಯಾನಿಸುತ್ತಿದ್ದ.

ಕೋಲಾಟದ ಕಲೆ ಕರಗತವಾದ ಮೇಲೆ ಕೃಷ್ಣೇಗೌಡ ತನ್ನದೇ ಆದ ಕೋಲಾಟ ತಂಡವನ್ನು ಕಟ್ಟಿದ. ಅದ್ಭುತವಾಗಿ ಕೋಲಾಟವಾಡುವ ಉತ್ಸಾಹಿ

ಯುವಕರ ತಂಡ ಅದು. ಆಹ್ವಾನದ ಮೇರೆಗೆ ಹಲವು ಕಡೆಗಳಿಗೆ ಹೋಗಿ ಆ ತಂಡ ಪ್ರದರ್ಶನನೀಡಿತು, ಹಣವನ್ನೂ ಗಳಿಸಿತು.

ಕೃಷ್ಣೇಗೌಡ ಅನೇಕ ತಂಡಗಳನ್ನು ಹುಟ್ಟುಹಾಕಿ ಹೊಸ ಹೊಸ ಯುವಕರಿಗೆ ಕೋಲಾಟವನ್ನು ಕಲಿಸಿದ. ಹೊಸತಂಡಕ್ಕೆ ಕಲಿಸುವಾಗ ಸಾಸಲು ಶಂಭುಲಿಂಗ, ನಂಜನಗೂಡು ನಂಜುಂಡೇಶ್ವರ, ಮೇಲುಕೋಟೆ ಚೆಲುವರಾಯ, ಚುಂಚನಗಿರಿ ಭೈರವ ದೇವರಿಗೆ ಹರಸಿಕೊಳ್ಳುತ್ತಿದ್ದರು. ಪ್ರತಿಯೊಬ್ಬರೂ ಮೂರು ಕಾಸು ಆರು ಕಾಸು ಹರಕೆ ಹಣ ಮುಡಿಪುಕಟ್ಟಿಡುತ್ತಿದ್ದರು. ಕೋಲಾಟ ಕಲಿತ ಮೇಲೆ ಕಾಣಿಕೆಒಪ್ಪಿಸಿ, ಹರಕೆತೀರಿಸುತ್ತಿದ್ದರು.

ಕೃಷ್ಣೇಗೌಡ ನೂರಾರು ಕೋಲಾಟಕ್ಕೆ ಹೆಜ್ಜೆಹಾಕುತ್ತಿದ್ದ; ಪ್ರತಿಯೊಂದಕ್ಕೂ ಹಾಡುತ್ತಿದ್ದ. ಕೊರವಂಜಿ ಕೋಲಾಟದಲ್ಲಿ ಅವನದು ವಿಶೇಷ ಪರಿಣತಿ. ಅವನ ಕೋಲಾಟದ ಕೊರವಂಜಿ ವೇಷ, ಕುಣಿತ, ಹಾಡುಗಾರಿಕೆ, ಸಂಭಾಷಣೆ, ಹಾಸ್ಯಪ್ರಸಂಗ ಮನೋರಂಜನೆಯ ಪರಾಕಾಷ್ಠೆ. ಆ ರೂಪಕಮಯ ಸನ್ನಿವೇಶ ಗಂಟೆಗಟ್ಟಲೆ ನಡೆಯುತ್ತಿತ್ತು. ಕೊರವಂಜಿ ಕೋಲಾಟದಲ್ಲಿ ಕೃಷ್ಣೇಗೌಡನೇ ನವೀನ ರೂಪಕ ಕಲ್ಪಿಸಿ ಸ್ವಾರಸ್ಯವಾಗಿ ನಿರೂಪಿಸುತ್ತಿದ್ದ. ರಾಜನಿಗೆ ಅಣ್ಣತಮ್ಮ ಶೇವಿಂಗ್ ಮಾಡುವ ಕಥೆ, ಹೂಸಿನ ಕಥೆ ಮನೋರಂಜನೆಯ ಗರಿಷ್ಠ ಪರಿಣಾಮಕ್ಕೆ ಕಾರಣವಾಗಿದ್ದವು. ಕೊರವಂಜಿ ಕೋಲಾಟ ಕೃಷ್ಣೇಗೌಡನಿಗೆ 'ಕೊರವಂಜಿ ಕೃಷ್ಣೇಗೌಡ ಎಂಬ ಅಂಕಿತನಾಮ ತಂದುಕೊಟ್ಟಿತು.

ಕೃಷ್ಣೇಗೌಡ ಬೆಂಗಳೂರು ವಿದ್ಯಾನಗರದಲ್ಲಿ ನಡೆದ ನಾಲ್ಕನೆಯ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಒಂದು ಸಾವಿರ ಕೋಲಾಟ ಕಲಾವಿದರಿಗೆ ಸಾಮೂಹಿಕ ತರಬೇತಿ ನೀಡಿ ಪ್ರದರ್ಶಿಸಿ ತನ್ನ ಅಸಾಧಾರಣ ಕಲಾನೈಪುಣ್ಯವನ್ನು

ತೋರಿಸಿದ (೧೯೯೭). ಹಂಪೆ ಉತ್ಸವದಲ್ಲಿ ಪಾಲ್ಗೊಂಡು ಕೋಲಾಟ ಪ್ರದರ್ಶಿಸಿ ಪುರಸ್ಕಾರಕ್ಕೆ ಪಾತ್ರನಾದ (೨೦೦೦). ದೆಹಲಿಯ ಕನ್ನಡ ಸಂಸ್ಥೆಯಲ್ಲಿ ಕೊರವಂಜಿ ಕೋಲಾಟ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದ ೯೧೯೯೭). ಇಂಥ ಉದಾಹರಣೆಗಳು ಸಾಕಷ್ಟಿವೆ.

ಕೃಷ್ಣೇಗೌಡ ಕಟ್ಟಿದ ಕೋಲಾಟದ ತಂಡಗಳು ಹೀಗಿವೆ : ಜಯರಾಮ ಮತ್ತು ಸಂಗಡಿಗರು (ಸುಂಕ ತೊಣ್ಣೂರು), ಜೋಗಯ್ಯ ಮತ್ತು ಸಂಗಡಿಗರು (ಹೊರಳು ಚಂದಗಾಲು), ದೇವರಾಜು ಮತ್ತು ಸಂಗಡಿಗರು (ಇಂಗಿಲ ಕುಪ್ಪೆ), ಶಿವಣ್ಣ ಮತ್ತು ಸಂಗಡಿಗರು (ಕದಲಗೆರೆ –ಮೇಲುಕೋಟೆ), ನರಸಿಂಹ ಮತ್ತು ಸಂಗಡಿಗರು (ಹೊಸಕೋಟೆ–ಪಾಂಡವಪುರ), ಸಣ್ಣಯ್ಯ ಮತ್ತು ಸಂಗಡಿಗರು (ವೀರೆಗೌಡನ ಕೊಪ್ಪಲು), ಕೃಷ್ಣೇಗೌಡ ಮತ್ತು ಸಂಗಡಿಗರು (ಹೆಗ್ಗಡೆಹಳ್ಳಿ), ಚೆಲುವಪ್ಪ ಮತ್ತು ಸಂಗಡಿಗರು (ಶಣಬದ ಕಪ್ಪಲು), ಚಿಕ್ಕಣ್ಣ ಮತ್ತು ಸಂಗಡಿಗರು (ಸಿಂಗರ ಗೌಡನ ಕೊಪ್ಪಲು) ಇತ್ಯಾದಿ.

ಕೃಷ್ಣೇಗೌಡ ಆಹ್ವಾನದ ಮೇರೆಗೆ ಹಲವು ಊರುಗಳಿಗೆ ಹೋಗಿ ಆಸಕ್ತರಿಗೆ ಕೋಲಾಟ ತರಬೇತಿ ನೀಡಿದ. ಕೆಲವು ಸ್ಥಳಗಳ ಹೆಸರು ಹೀಗಿವೆ: ಶಿವಾರಗುಡ್ಡ, ಆದಿಚುಂಚನಗಿರಿ, ಕುಂತಿಬೆಟ್ಟ, ಅಕ್ಕಿ ಹೆಬ್ಬಾಳು, ಕೆ.ಆರ್.ಎಸ್., ತುಮಕೂರು, ಬೆಂಗಳೂರು, ಸುತ್ತೂರು ಮಠ, ಮೈಸೂರು ಮಾನಸಗಂಗೋತ್ರಿ, ಮಾದೇಶ್ವರ ಬೆಟ್ಟ, ದಾವಣಗೆರೆ, ಕಾರವಾರ, ಬೀದರ್, ಬಾದಾಮಿ, ಮಡಿಕೇರಿ, ವಿರಾಜಪೇಟೆ, ತ್ರಿವೇಂಡ್ರಂ, ಹೊರನಾಡು ಇತ್ಯಾದಿ.

ಕೃಷ್ಣೇಗೌಡನ ಕೋಲಾಟ ಕಲೆಗೆ ವಿದೇಶ ಪ್ರವಾಸದ ಅವಕಾಶವೂ ದೊರೆಯಿತು. ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ

ನಿರ್ದೇಶನಾಲಯದಿಂದ, ಅವನ ಒಂಬತ್ತು ಜನರ ಕೊರವಂಜಿ ಕೋಲಾಟದ ತಂಡ ಮೇ ೨೦೦೨ರಿಂದ ಜೂನ್ ೨೦೦೨ರವರೆಗೆ ಎರಡು ತಿಂಗಳು ವಿದೇಶ ಪ್ರವಾಸಮಾಡಿ, ಕೊರವಂಜಿ ಕೋಲಾಟ ಮತ್ತು ಕೊಡದ ಕೋಲಾಟಗಳ ಆಕರ್ಷಕ ಪ್ರದರ್ಶನ ನೀಡಿ ಹಿಂದಿರುಗಿತು. ಅದು ಎರಡನೇ ವಿದೇಶ ಪ್ರವಾಸದ ಅನುಭವ.

ಕೃಷ್ಣೇಗೌಡನನ್ನು 'ನೀನು ಕಲಿತಿರುವ ಕೋಲಾಟಗಳ ಹೆಸರು ಹೇಳು' ಎಂದರೆ ಪಟಪಟನೆ ನೂರಾರು ಹೆಸರು ಹೇಳುತ್ತಿದ್ದ. ಜೊತೆಗೆ ಅವುಗಳಿಗೆ ಸಂಬಂಧಿಸಿದ ಕೋಲುಪದಗಳನ್ನೂ ಉಲ್ಲೇಖಿಸುತ್ತಿದ್ದ. ಉದಾಹರಣೆಗೆ : ಪ್ರಾರ್ಥನೆಕೋಲು, ನಾಡಕೋಲು, ಜೀರಗಡ್ಡಿ ಕೋಲು, ರುಬ್ಬುಗೋಲು, ಒಡಗಡ್ಡಿಕೋಲು, ಚಕ್ರಕೋಲು, ಜಡೆಕೋಲು, ಸುಗ್ಗಿಕೋಲು, ಲಕ್ಕಿಕೋಲು, ಹೂಗೋಲು, ಸಿಂಗೋಲು, ಜೋಡಿಕೋಲು, ಉಯ್ಯಾಲೆ ಕೋಲು, ಕೊರವಂಜಿ ಕೋಲು, ಗೆಜ್ಜೆಕೋಲು, ಕೊಕ್ಕುಕೋಲು, ಸೋಬಾನೆಕೋಲು, ಸದಾಶಿವಕೋಲು, ನಾರಾಯಣಕೋಲು, ಕರಗದ ಕೋಲು, ಮರಗೋಲು, ಮಳೆಕೋಲು, ಕೊಡದ ಕೋಲು, ಕೆಂಪೇಗೌಡ ಕೋಲು, ಜೋಕ್ಸ್‌ಕೋಲು, ಬಿಡುಕೋಲು ಇತ್ಯಾದಿ.

ಗೊಂಬೆ ಗಾರುಡಿಗ ಕೃಷ್ಣೇಗೌಡ

ಜನಪದ ಕಲಾವಿದ ಕೃಷ್ಣೇಗೌಡ ಒಮ್ಮೆ ರೈಲ್ವೆ ಪೋಲೀಸರಿಗೆ ಕೋಲಾಟದ ತರಬೇತಿ ನೀಡಲು ತಿರುಚನಾಪಳ್ಳಿಗೆ ಹೋಗಿದ್ದ (೧೯೭೨). ಚೆನ್ನೈ ರಾಜ್ಯದ ಕಡೆಗೆ ಹೋದದ್ದು ಅದೇ ಮೊದಲು. ಅಲ್ಲಿ ನಡೆದ ಕಾರ್ಯಕ್ರಮದಲ್ಲಿ ಚೆನ್ನೈನ ಗಾರುಡಿಗ ಗೊಂಬೆತಂಡ ಪ್ರದರ್ಶನನೀಡಿ,

ಪರಶಸ್ತಿಗಳಿಸಿತು. ಕೃಷ್ಣೇಗೌಡನಿಗೆ ಕುತೂಹಲ ಕೆರಳಿತು. ತಾನೂ ಗಾರುಡಿಗ ಗೊಂಬೆ ಪ್ರದರ್ಶನವನ್ನು ಏಕೆ ನೀಡಬಾರದು ಅನ್ನಿಸಿತು. ತನ್ನ ಸೋಬಾನೆ ಗೀತಗಾಯನ, ಕೋಲಾಟದ ಪ್ರದರ್ಶನದ ಜೊತೆಗೆ ಗೊಂಬೆ ಪ್ರದರ್ಶನವನ್ನೂ ಇಟ್ಟುಕೊಂಡರೆ ಜನರನ್ನು ಆಕರ್ಷಿಸಬಹುದು ಎಂದುಕೊಂಡ. ಅಂದು ಪ್ರದರ್ಶನ ನೀಡಿದವರೊಡನೆ ಮಾತುಕತೆಯಾಡಿದ. ಗೊಂಬೆಗಳನ್ನು ಕೊಳ್ಳುವ ಬಯಕೆಯನ್ನು ಮುಂದಿಟ್ಟ. ಮಾತುಕತೆ ಕುದುರಿತು. ಮೌಲ್ಡಿಂಗ್ ರಾಜು ಎಂಬಾತನಿಂದ ಮುಖವಾಡಗಳನ್ನೂ ಹತ್ತು ಗೊಂಬೆಗಳನ್ನೂ ಕೊಂಡುಕೊಂಡ.

ರಾಜ–ರಾಣಿ, ಅಯ್ಯಂಗಾರ್–ಅವನ ಹೆಂಡತಿ, ಅಜ್ಜ–ಅಜ್ಜಿ, ನಕಲಿ–ಅವನ ಹೆಂಡತಿ, ಶೆಟ್ಟಿ–ಅವನ ಹೆಂಡತಿ, ಜೋಕರ್–ಜೋಕರ್ ಹೆಂಡತಿ, ಕರಿಯಣ್ಣ–ಕೆಂಚಣ್ಣ, ಗಾರುಡಿಗ–ಗಾರುಡಿಗಿ, ಗಣೇಶ–ನಂದೀಶ ಇತ್ಯಾದಿ ಗೊಂಬೆಗಳನ್ನು ಕೃಷ್ಣೇಗೌಡ ಲಕ್ಷ್ಮೀಸಾಗರಕ್ಕೆ ತಂದ. ಗೊಂಬೆಪ್ರದರ್ಶನಕ್ಕೆ ಸೂಕ್ತವಾದ ವ್ಯಕ್ತಿಗಳನ್ನು ಆಯ್ಕೆಮಾಡಿದ. ತಮಟೆ, ತಾಳ ಮೊದಲಾದ ವಾದ್ಯಗಾರರನ್ನೂ ವ್ಯವಸ್ಥೆಮಾಡಿದ. ಜೊತೆಗೆ ಚಿತ್ತಾರದ ಛತ್ರಿ ಬೇರೆ. ಪ್ರದರ್ಶನದಲ್ಲಿ ದೊಡ್ಡ ಹಾಗೂ ಚಿಕ್ಕ ಆಕಾರದ ವಿವಿಧ ಗೊಂಬೆಗಳ ಸಾಲೇ ಹೊರಡುವಂತೆ ಕಲ್ಪಿಸಿದ. ಗೊಂಬೆಗಳಿಗೆ ಆಕರ್ಷಕ ಬಣ್ಣ, ಮಿರುಗುವ ವೇಷಭೂಷಣ ಅಳವಡಿಸಿದ. ಅದಕ್ಕಾಗಿ ತನ್ನ ನೇತೃತ್ವದಲ್ಲಿ ಗಾರುಡಿ ಗೊಂಬೆ ತಂಡವನ್ನು ಹುಟ್ಟುಹಾಕಿದ. ವಿವಿಧ ವಯಸ್ಸಿನ ಇಪ್ಪತ್ತು ಜನರ ತಂಡ ಅದು. ಅದರಲ್ಲಿ ಹಿರಿಯರೂ ಕಿರಿಯರೂ ಇದ್ದರು. ಗೊಂಬೆಗಳ ಸಾಗಾಟಕ್ಕೆ, ಕಲಾವಿದರ ಪ್ರಯಾಣಕ್ಕೆ ಲಾರಿಯನ್ನು ಇಟ್ಟುಕೊಂಡ. ಅದು ದೊಡ್ಡ ಸಂಸಾರವೇ ಆಯಿತು.

ಕೃಷ್ಣೇಗೌಡ ಕೆರೆತೊಣ್ಣೂರು ನಾರಾಯಣಸ್ವಾಮಿ ಜಾತ್ರೆಯಲ್ಲಿ ಗಾರುಡಿಗ ಗೊಂಬೆಯ ಮೊದಲ ಪ್ರದರ್ಶನ ನೀಡಿದ. ಅದು ಜನರನ್ನು ಬಹಳವಾಗಿ ರಂಜಿಸಿತು. ಕೃಷ್ಣೇಗೌಡನಿಗೆ 'ಗೊಂಬೆ ಗಾರುಡಿಗ ಕೃಷ್ಣೇಗೌಡ' ಎಂಬ ಹೊಸ ಹೆಸರು ಸೇರಿಕೊಂಡಿತು. ಅನಂತರ ಆದಿಚುಂಚನಗಿರಿ ಜಾತ್ರೆ, ಮೈಸೂರು ದಸರಾದಲ್ಲೂ ಗೊಂಬೆ ಪ್ರದರ್ಶನ ನೀಡಿದ. ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಐದುನೂರ್ರಕ್ಕೂ ಹೆಚ್ಚು ಪ್ರದರ್ಶನಗಳಾದವು.

ಸೋಬಾನೆ ಗೀತಗಾಯನ, ಕೋಲಾಟ ಮತ್ತು ಗೊಂಬೆ ಪ್ರದರ್ಶನಗಳಿಂದ ಕೃಷ್ಣೇಗೌಡ ಮತ್ತು ಅವನ ತಂಡದವರಿಗೆ ವರ್ಷವೆಲ್ಲಾ ಬಿಡುವಿಲ್ಲದಷ್ಟು ಕಾರ್ಯಕ್ರಮಗಳು ದೊರಕಿದವು. ಪ್ರಸಿದ್ಧಿಯ ಜೊತೆಗೆ, ಕೈತುಂಬ ಸಂಭಾವನೆಯೂ ದೊರಕಿತು. ಕೃಷ್ಣೇಗೌಡನ ಆರ್ಥಿಕ ಸ್ಥಿತಿಯೂ ಸುಧಾರಿಸಿತು. ಕಲಾಪ್ರದರ್ಶನದಿಂದ ವಿದ್ಯಾವಂತರ, ಅಧಿಕಾರಿಗಳ ಸಂಪರ್ಕ ದೊರಕಿತು. ಅದನ್ನು ವ್ಯವಹಾರಕ್ಕೂ ಚೆನ್ನಾಗಿ ಬಳಸಿಕೊಂಡ. ಜನಪದ ಕಲೆಯನ್ನು ಆತ್ಮಸಂತೋಷಕ್ಕೂ ಆರ್ಥಿಕಲಾಭಕ್ಕೂ ಯಶಸ್ವಿಯಾಗಿ ಬಳಸಿಕೊಂಡ ಕೆಲವೇ ಜನಪದ ಕಲಾವಿದರಲ್ಲಿ ಕೃಷ್ಣೇಗೌಡ ಅಗ್ರಗಣ್ಯ.

ಕೃಷ್ಣೇಗೌಡನ ಜನಪದ ಕಲಾವಂತಿಕೆಯನ್ನು ಗುರುತಿಸಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು (೧೯೯೪), ರಾಜ್ಯ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಿತು (೨೦೦೨). ಕರ್ನಾಟಕ ಜಾನಪದ ಪರಿಷತ್ತಿನ ಜಾನಪದ ಲೋಕೋತ್ಸವ ಪ್ರಶಸ್ತಿ (೨೦೦೨) ಲಭ್ಯವಾಯಿತು. ವಿಶ್ವವಿದ್ಯಾಲಯ, ಖಾಸಗಿ ಸಂಸ್ಥೆಗಳ ಹಲವು ಪ್ರಶಸ್ತಿಗಳೂ ಹುಡುಕಿಕೊಂಡು ಬಂದವು. ಅವೆಲ್ಲ ಅವನ ಸಾಧನೆಯ ಫಲ.

ಪ್ರಥಮ ಬಾರಿಗೆ ಸೋಬಾನೆ ಹಾಡು ಹಾಡಿದಾಗ, ಕೋಲಾಟದ ಪ್ರದರ್ಶನ ನೀಡಿದಾಗ ಕೃಷ್ಣೇಗೌಡನಿಗೆ ಹದಿನೈದನೇ ವಯಸ್ಸಿನ ಪ್ರಾಯ. ಅವುಗಳ ಕಲಿಕೆಗೆ ಸಾಕಷ್ಟು ಸಮಯ ವ್ಯಯಮಾಡಿದ. ಕೋಲಾಟದ ಎಲ್ಲಾ ವರಸೆಗಳನ್ನೂ ಹಾಡುಗಳನ್ನೂ ಕಲಿಯಲು ಎರಡು ವರ್ಷ ಬೇಕಾಯಿತು. ಸಾಮಾನ್ಯ ಕಲಿಕೆಗೆ ಆರುತಿಂಗಳು ಸಾಕು. ಗಾರುಡಿ ಬೊಂಬೆ ಮೊದಲ ಪ್ರದರ್ಶನ ನೀಡಿದಾಗ ಅವನಿಗೆ ಸುಮಾರು ನಲವತ್ತನೇ ವಯಸ್ಸು. ಅದರ ಸಿದ್ಧತೆಗೆ ನಾಲ್ಕೈದು ತಿಂಗಳು ಶ್ರಮಿಸಿದ. ಜನಪದ ಕಲೆಗಳ ಸ್ವಾಧೀನಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಜಾಯಮಾನ ಅವನದು.

ಕೃಷ್ಣೇಗೌಡ ಸದಾಕಾಲ ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಯಲಯಗಳ ನೇರ ಸಂಪರ್ಕದಲ್ಲಿರುತ್ತಿದ್ದ. ಜನಪದ ಕಲಾಪ್ರೇಮಿಗಳ ಸಂಘ ಸಂಸ್ಥೆಗಳೊಡನೆಯೂ ಮಧುರಬಾಂದವ್ಯವನ್ನು ಹೊಂದಿದ್ದ. ಡಾ. ಜೀಶಂ ಪರಮಶಿವಯ್ಯ, ಎಚ್.ಎಲ್. ನಾಗೇಗೌಡ, ಪ್ರೊ. ಡಿ. ಲಿಂಗಯ್ಯ, ಡಾ. ಹಿ.ಶಿ. ರಾಮಚಂದ್ರೇಗೌಡ, ಮೊದಲಾದ ತಜ್ಞರಿಂದ ಜನಪದ ಕಲಾಪ್ರದರ್ಶನಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದ. ಅವನಿಗೆ ಸಮಕಾಲೀನ ಜನಪದ ಕಲಾವಿದರ ಹಾಗೂ ವಿದ್ವಾಂಸರ ಒಡನಾಟವಿತ್ತು. ಮೂರು ಹೊತ್ತೂ ಜನಪದ ಕಲೆಗಳ ಬಗೆಗೆ ಚಿಂತಿಸುತ್ತಿದ್ದ. ತಾನು ಜನಪದ ಕಲೆಗಳನ್ನು ಕಲಿತು ಪ್ರದರ್ಶಿಸಿದುದಲ್ಲದೆ, ಅನೇಕರಿಗೆ ತರಬೇತಿ ನೀಡಿ, ಕಲಾಪ್ರದರ್ಶನ ಮುಂದುವರಿಯಲು ಸ್ಫೂರ್ತಿಯಾದ. ಅದು ಅವನ ದೊಡ್ಡಕೊಡುಗೆ.

ಕೃಷ್ಣೇಗೌಡನಿಗೆ ಜಾನಪದಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳಲ್ಲಿ ಆಸಕ್ತಿ: ಸೋಬಾನೆ ಹಾಡು, ಬಳ್ಳಿಗಾಣಿಗರೆಣ್ಣು, ಗವಿಯಾ ರಂಗಪ್ಪನ ಜಾತ್ರೆಗೆ

ಮತ್ತು ಹೋಗಿ ನೋಡಿ – ಜನಪದ ಗೀತೆ ಧ್ವನಿಸುರುಳಿಗಳಿಗೆ ದನಿನೀಡಿ, ತಯಾರಿಕೆಗೆ ನೆರವಾಗಿದ್ದಾನೆ. ಮುದುಕನ ಮದುವೆ, ನುಚ್ಚಾಯ್ತು ನೀರಹೊಳೆಯಾಗೆ, ಕುಂಜಾಲು ಕಣಿವೆ ಕೆಂಪು ಹೂವು ಮತ್ತು ಸತ್ಯಸಂಕಮ್ಮ ರೂಪಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾನೆ. ಪದವ ಕೇಳವ್ವ, ಈ ಅಕ್ಷರ ನಮ್ಮದು ಸಕಲನ ಗ್ರಂಥಗಳ ಸಂಪಾದಕರಿಗೆ ನೆರವಾಗಿದ್ದಾನೆ. ಈ ಅಪರೂಪದ ಜನಪದ ಕಲಾವಿದನನ್ನು ಕುರಿತು ಸದಾಶಿವ ಎಣ್ಣೆಹೊಳೆ, ತೈಲೂರು ವೆಂಕಟಕೃಷ್ಣ, 'ಚಿತ್ರಗುಪ್ತ' ಮೊದಲಾದವರು ಪತ್ರಿಕಾ ಲೇಖನಗಳನ್ನು ಬರೆದು ಓದುಗರಿಗೆ ಪರಿಚಯಿಸಿದ್ದಾರೆ.

ಸೋಬಾನೆ ಕೃಷ್ಣೇಗೌಡ ಮಾತುಗಾರ. ವಾಚಾಳಿ ಎಂಬ ಗುಂಪಿಗೆ ಸೇರುವಂಥವನು. ಚಟಪಟನೆ ಮಾತಾಡುವುದು ಅವನ ಸ್ವಭಾವ. ಕೇಳಿದ್ದನ್ನು ಕೂಡಲೆ ತನ್ನದಾಗಿಸಿಕೊಳ್ಳುವ ಕುಶಲಮತಿ. ನೋಡಿದ್ದನ್ನು ಅನುಕರಿಸುವ ಗುಣ. ಯಾರಾದರೂ ಹಾಡಿದರೆ, ಕುಣಿದರೆ, ಅಭಿನಯಿಸಿದರೆ ಅದರಲ್ಲಿ ಸ್ವಲ್ಪವನ್ನಾದರೂ ವಶಪಡಿಸಿಕೊಳ್ಳುವ ಅನುಕರಣಶೀಲ. ಹಾಗಾಗಿ ಕೇಳಿದ್ದನ್ನು ಕಲಿಯುವ, ನೋಡಿದ್ದನ್ನು ಅನುಕರಿಸುವ ಕಲೆ ರಕ್ತಗತವಾಗಿತ್ತು. ಕೋಲಾಟದ ವರಸೆಗಳನ್ನು ಹಾಡುವುದಕ್ಕೂ ಹಾಡಿಗೆ ತಕ್ಕಂತೆ ಅಭಿನಯಿಸಿ ತೋರಿಸುವುದಕ್ಕೂ ಇದರಿಂದ ಸಹಾಯವಾಗಿದೆ. ಯಾರಾದರೂ ಹೊಸ ವರಸೆಯಲ್ಲಿ ಕೋಲಾಟವಾಡಿದ್ದನ್ನು ನೋಡಿದರೆ, ಮಾರನೆಯ ದಿನಕ್ಕೆ ಅದು ಅವನದಾಯಿತು ಎಂದೇ ಲೆಕ್ಕ. ಹೊಸದಾಗಿ ಕೇಳಿದ ಹಾಡುಗಳೂ ಕೂಡ ಅವನ ಭಾವಕೋಶಕ್ಕೆ ಪ್ರವೇಶಿಸಿ ಶಾಶ್ವತವಾಗಿ ನೆನಪಿನಲ್ಲಿ ಉಳಿಯುವುದು ಗ್ಯಾರಂಟಿ. ಹಾಗಾಗಿ ಹಾಡುಕಟ್ಟಿ ಹೇಳುವುದರಲ್ಲಿ ನಿಪುಣ.

ಸೋಬಾನೆ ಕೃಷ್ಣೇಗೌಡನದು ತೆಳುವಾದ ಮೈಕಟ್ಟು. ಮಟ್ಟಸವಾದ ಎತ್ತರ. ಕೋಲಾಟಕ್ಕೆ ಹೇಳಿಮಾಡಿಸುವ ಅಂಗಸೌಷ್ಠವ. ಬಟ್ಟಮುಖ.

ಕಪ್ಪು ಬಣ್ಣ, ಶುಭ್ರವಾದ ಜುಬ್ಬ ಪಂಚೆ ಧರಿಸುವುದು ರೂಢಿ. ಹೆಗಲಮೇಲೊಂದು ಶಾಲು, ಕಾಲಿಗೆ ಎಕ್ಕಡ. ಊಟವಾದ ಮೇಲೆ ಬಾಳೆಹಣ್ಣು ತಿನ್ನುವುದು ರೂಢಿ. ಆಗಾಗ ಪೊಟ್ಟಣದ ಅಡಿಕೆ ಜಗಿಯುವುದು ಅಭ್ಯಾಸ. ಇತರ ಚಟಗಳು ಇರಲಿಲ್ಲ. ವಿದೇಶದಲ್ಲಿ ಕೊಟ್ಟ ಮದ್ಯವನ್ನು ಕುಡಿಯದೆ ಸ್ವದೇಶಕ್ಕೆ ತಂದು ಮಾರಿದ್ದುಂಟು. ಕುಡುಕರ ಕಥೆ ಗೊತ್ತಿದ್ದರೂ ಕುಡಿಯುವ ಚಟಕ್ಕೆ ಬೀಳಲಿಲ್ಲ. ಬೀಡಿ ಸಿಗರೇಟಿನ ತೆವಲೂ ಇರಲಿಲ್ಲ. ಅತಿಥಿ ಸತ್ಕಾರದಲ್ಲಿ ಆಸಕ್ತಿ. ಆಗಾಗ ಸ್ನೇಹಿತರನ್ನು, ಬಂಧುಗಳನ್ನು ಬರಮಾಡಿಕೊಂಡು ಊಟ ಹಾಕಿಸಿ ಸಂತೋಷಿಸುತ್ತಿದ್ದ. ಅಂಥ ಸಂದರ್ಭಗಳಲ್ಲಿ ಧಾರಾಳವಾಗಿ ಖರ್ಚು ಮಾಡುವುದಕ್ಕೂ ಹಿಂಜರಿಯುತ್ತಿರಲಿಲ್ಲ. ಸಾಕಷ್ಟು ಸಾಹಿತಿಗಳ ಕಲಾವಿದರ ಪರಿಚಯವನ್ನು ಇಟ್ಟುಕೊಂಡಿದ್ದನು. ಅವರಲ್ಲಿಗೆ ಆಗಾಗ ಹೋಗಿಬರುವ ಬಳಕೆಯಿತ್ತು.

ಗ್ರಾಮೀಣ ಕಲಾವಿದನಾದರೂ ಕೊನೆಕೊನೆಗೆ ನಗರದ ಕಲಾ ಪ್ರೇಮಿಗಳ ಸಂಪರ್ಕವನ್ನು ಧಾರಾಳವಾಗಿಯೇ ಇಟ್ಟುಕೊಂಡ. ತನ್ನಂತಹ ಕಲಾವಿದರ, ಕಲಾಪೋಷಕರ ಬದುಕಿನ ಏರುಪೇರುಗಳನ್ನು ಬಲ್ಲವನಾಗಿದ್ದ. ಕಲೆಯಿಂದ ಅನುಕೂಲವಂತನಾದರೂ ಹಿಂದಿನ ಬಡತನದ ದಿನಗಳ ಬವಣೆಯನ್ನು ಮರೆಯಲಿಲ್ಲ. ಕಿರಿಯ ಕಲಾವಿದರನ್ನು ಬರಮಾಡಿಕೊಂಡು, ಪ್ರದರ್ಶನ ಕೊಡಿಸಿ, ಸನ್ಮಾನಿಸುವುದರಲ್ಲಿ ಸಂತೋಷ ಪಡೆಯುತ್ತಿದ್ದ. ತನಗೆ ಬಂದ ಸನ್ಮಾನದ ಶಾಲುಗಳನ್ನು ಇತರರಿಗೆ ವಿತರಿಸಿ ಹೆಮ್ಮೆಪಡುತ್ತಿದ್ದ.

ಮದುವೆ ಮನೆಗಳಲ್ಲಿ ಹೆಂಗಸರೊಡನೆ ಸೇರಿಕೊಂಡು ಸೋಬಾನೆ ಪದಗಳನ್ನು ಹಾಡುವುದರಿಂದ ಕೆಲವರ ಟೀಕೆಗೆ ಒಳಗಾದದ್ದುಂಟು. ಹೆಂಗಸರೂ ಗಂಡಸರೂ ಆಡಿಕೊಂಡು ಮೂತಿಗೆ ತಿವಿದಿರುವುದುಂಟು. ಆದರೂ

ಹಾಡುವುದನ್ನು ಬಿಡಲಿಲ್ಲ. ಕರ್ನಾಟಕದಲ್ಲಿ ಜನಪದಗೀತೆಗಳನ್ನು ಹಾಡುವ ಗಂಡಸರು ಬೇಕಾದಷ್ಟಿದ್ದಾರೆ. ಆದರೆ ಸೋಬಾನೆ ಪದಗಳನ್ನು ಹಾಡುವ ಗಂಡಸರು ಇಬ್ಬರು ಮೂವರು ಮಾತ್ರ. ಅವರಲ್ಲಿ ಕೃಷ್ಣೇಗೌಡ ಅಗ್ರಗಣ್ಯ. ಹಾಡುವುದರ ಜೊತೆಗೆ ಕೋಲಾಟದಲ್ಲೂ ಗಾರುಡಿಗ ಗೊಂಬೆ ಪ್ರದರ್ಶನದಲ್ಲೂ ಪಳಗಿದ್ದು ವಿಶೇಷ. ಜನಪದ ಕಲಾವಿದರಲ್ಲಿ ಕೃಷ್ಣೇಗೌಡನದು ಬಹುಮುಖಿಯಾದ ಅನನ್ಯ ಪ್ರತಿಭೆ.

ಒಕ್ಕಲಿಗರ ಜಾತಿಯ ಕೃಷ್ಣೇಗೌಡ ಸಸ್ಯಾಹಾರಿಯೂ ಹೌದು ಮಾಂಸಾಹಾರಿಯೂ ಹೌದು. ಸಿಕ್ಕಿದ ಆಹಾರದಲ್ಲಿ ತೃಪ್ತಿಪಡುತ್ತಿದ್ದ ಜೀವ. ಇದೇ ಬೇಕು, ಅದೇ ಬೇಕು ಎಂಬ ಹಟವಿಲ್ಲ. ಆತನ ಜೀವನದಲ್ಲಿ ಹಸಿದು ಬಂಗಪಟ್ಟ ದಿನಗಳೂ ಇದ್ದವು, ಉಂಡು ಸಂತೋಷಿಸಿದ ದಿನಗಳೂ ಬಂದವು.

ಅನುಗಾಲ ಜನಪದ ಕಲಾಪ್ರದರ್ಶನದಲ್ಲೇ ನಿರತನಾಗಿದ್ದ ಕೃಷ್ಣೇಗೌಡ ಜೀವನವೆಲ್ಲಾ ಚಟುವಟಿಕೆಯಿಂದಿದ್ದ. ಜನಪದ ಕಲಾವಿದರ ಗೌರವ ಗುಣಮಟ್ಟವನ್ನು ಕಾಯ್ದುಕೊಂಡಿದ್ದ. ಜನಪದ ಕಲೆಯಿಂದ ಜೀವನ ನಿರ್ವಹಣೆಯೂ ಸಾಧ್ಯವೆಂಬುದನ್ನು ಸಾಧಿಸಿ ತೋರಿಸಿದ. ಸಂಭಾವನೆ ಪಡೆದು ಜನಪದ ಕಲಾಪ್ರದರ್ಶನ ನೀಡುತ್ತಿದ್ದ ಕೆಲವೇ ಮಂದಿ ಕಲಾವಿದರಲ್ಲಿ ಒಬ್ಬನಾಗಿದ್ದ. ಜನಪ್ರಿಯ ಜನಪದ ಕಲಾವಿದನಾಗಿದ್ದ ಸೋಬಾನೆ ಕೃಷ್ಣೇಗೌಡ ಅರ್ಬುದ ರೋಗಕ್ಕೆ ತುತ್ತಾಗಿ ವಿಧಿವಶನಾದ (ಇ. ೬. ೨೦೦೫). ಅವನಿಂದ ತರಬೇತಿ ಪಡೆದ ನೂರಾರು ಕಲಾವಿದರು ಜನಪದ ಕಲಾಪ್ರದರ್ಶನ ಕಾಯಕವನ್ನು ಮುಂದುವರಿಸಿದ್ದಾರೆ.

* * *

ಸೋಬಾನೆ ಕೃಷ್ಣೇಗೌಡ

ಮಂಡ್ಯ ಜಿಲ್ಲೆ ಲಕ್ಷ್ಮೀಸಾಗರದ ಕೃಷ್ಣೇಗೌಡ ಸೋಬಾನೆ ಗೀತಗಾಯನ, ಕೋಲಾಟ, ಕೊರವಂಜಿಕುಣಿತ, ಕೊಡದಕುಣಿತ, ಗಾರುಡಿಗೊಂಬೆ ಪ್ರದರ್ಶನದಲ್ಲಿ ತನ್ನದೇ ಛಾಪುಮೂಡಿಸಿದ ಅಭಿಜಾತ ಜನಪದ ಕಲಾವಿದ. ತಾನು ಕರಗತಮಾಡಿಕೊಂಡ ಜನಪದ ಕಲೆಗಳನ್ನು ರಾಜ್ಯದಲ್ಲಿ, ಹೊರರಾಜ್ಯದಲ್ಲಿ, ವಿದೇಶದಲ್ಲಿ ಪ್ರದರ್ಶಿಸಿ ಹೆಸರಾದ ಕಲಾವಿದ. ಕಲಿತ ಕಲೆಗಳನ್ನು ಹಲವರಿಗೆ ಕಲಿಸಿ ಜನಪದ ಕಲೆಗಳ ಮುಂದುವರಿಕೆಗೆ ಸ್ಫೂರ್ತಿಯಾದ ಕಲಾವಿದ. ಜನಪದ ಕಲೆಗಳನ್ನು ಆರ್ಥಿಕ ಅಭಿವೃದ್ಧಿಗೂ ಯಶಸ್ವಿಯಾಗಿ ಬಳಸಿಕೊಂಡ ಜಾಣ. ಜನಪದ ಕಲೆಗಳನ್ನು ಬದುಕಿನ ಅವಿಭಾಜ್ಯ ಅಂಗವಾಗಿ ದುಡಿಸಿಕೊಂಡ ಜಾನಪದನಿಷ್ಠ. ಅನನ್ಯಜನಪದ ಕಲಾವಿದ ಸೋಬಾನೆ ಕೃಷ್ಣೇಗೌಡನ ಪರಿಚಯಕ್ಕೆ ಪ್ರಸ್ತುತ ಗ್ರಂಥ ಮೀಸಲಾಗಿದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ನಂ.೧, ಜಾನಪದ ಸಿರಿಭುವನ, ಜಲದರ್ಶಿನಿ ಬಡಾವಣೆ,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ.ಇ.ಎಲ್. ರಸ್ತೆ,
ಬೆಂಗಳೂರು - ೫೬೦ ೦೫೪